# 8

# ಸಂಯುಕ್ತ ರಾಜ್ಯ

## ಸೌಲನ ಅಭಿಷೇಕದಿಂದ ರೆಹೊಬ್ಬಾಮನ ಸಿಂಹಾಸನಾರೋಹಣದ ವರೆಗೆ

## ಕ್ರಿ.ಪೂ. 1095-975 (1 ಸಮುವೇಲ 11-31; 2 ಸಮುವೇಲ; 1 ಅರಸುಗಳು 1-11)

### I. ಪೀಠಿಕೆ – ದೇವಾಧಿಪತ್ಯ.

**1. ಮೂಲ ರೂಪ.**-ಇಸ್ರಾಯೇಲ ಜನಾಂಗವು ಸಿನಾಯಿ ಬಳಿಯಲ್ಲಿ ಜನಾಂಗವಾಗಿ ಸಂಘಟಿಸಲ್ಪಟ್ಟಿದ್ದರಿಂದಲೇ ನಿಜವಾಗಿ ಒಂದು ರಾಜ್ಯವಾಗಿತ್ತು. ಅವರು ದೇವರ ಆಳುವಿಕೆಯಲ್ಲಿದ್ದವರು. ಒಂದು ದೇವರ ರಾಜ್ಯ ಆಗಿದ್ದರು, ದೇವರು ನಿಜವಾಗಿಯೂ ಅವರ ಅರಸನಾಗಬೇಕಾಗಿದ್ದರೂ, ಮೋಶೆಯು ಮೊದಲು ಮತ್ತು ಒಂದು ಅರ್ಥದಲ್ಲಿ ಮಹಾಯಾಜಕರು, ಜನಾಂಗಕ್ಕೆ ದೇವರ ಪ್ರತಿನಿಧಿಗಳಾಗಿದ್ದರು. ಆದಾಗ್ಯೂ ಭೂಲೋಕದ ಅರಸನು ಮೊದಲಿನಿಂದ ಗಮನದಲ್ಲಿದ್ದಂತೆ ತೋರುತ್ತದೆ, ಅರಸರು ಅಬ್ರಹಾಮನ ವಂಶಜರಲ್ಲಿಯವರಾಗಬೇಕಿತ್ತು (ಆದಿಕಾಂಡ 17:16). ಮೋಶೆಯು ಅರಸನಿಗಾಗಿ ನಿಯಮವನ್ನು ಕೊಟ್ಟನು (ಧರ್ಮೋಪದೇಶಕಾಂಡ 17:14-20).

ಹೀಗಿರುವಾಗ, ಭೂಲೋಕದ ಅರಸನು ಅಬ್ರಹಾಮನ ವಾಗ್ದತ್ತ "ಸಂತತಿಯ" ಅತ್ಯುತ್ತಮ ಮಾದರಿಯನ್ನು ಒದಗಿಸಿದನು. ಅವನು ಎಲ್ಲಾ ಜನಾಂಗಗಳನ್ನು ಆಶೀರ್ವದಿಸಬೇಕಾಗಿತ್ತು; ಆದುದರಿಂದ, ಅನಂತರದ ಪ್ರವಾದನೆಯಲ್ಲಿ ಮೆಸ್ಸೀಯನು ದಾವೀದನ ವಂಶಜನು ಮತ್ತು ದಾವೀದನ ಸಿಂಹಾಸನದ ಮೇಲೆ ಕುಳಿತುಕೊಳ್ಳುವವನು ಆಗಿದ್ದನು.

**2. ರಾಜ್ಯಾಡಳಿತಕ್ಕೆ ಬದಲಾವಣೆ.**-ಸಮುವೇಲನ ಜೀವನದ ಕೊನೆಯಲ್ಲಿ ಜನರು ಅರಸನಿಗಾಗಿ ಬೇಡಿಕೊಂಡರು (ನೋಡಿರಿ 1 ಸಮುವೇಲ 8). ಅವರು ಎರಡು ಕಾರಣಗಳನ್ನು ಒತ್ತಿಹೇಳಿದರು: ಸಮುವೇಲನ ನಂತರ ನ್ಯಾಯಸ್ಥಾಪಕರಾಗಲು ಅವನ ಮಕ್ಕಳ ಅಯೋಗ್ಯತೆ, ಮತ್ತು ಸುತ್ತಲಿನ ಜನಾಂಗಗಳಿಗೆ ಇದ್ದಂತೆ ಯುದ್ಧದ ಸಮಯದಲ್ಲಿ ತಮ್ಮನ್ನು ನಡಿಸಲು ಇರುವ ಒಬ್ಬ ಅರಸನಿಗಾಗಿ ಅವರ ಅಪೇಕ್ಷೆ: ಇತರ ಕಾರಣವು ನ್ಯಾಯಸ್ಥಾಪಕರ ಅಧೀನತೆಯಲ್ಲಿ ಬೆಳೆಯುತ್ತಿದ್ದ ಅರಾಜಕತೆ ಹಾಗೂ ತಮ್ಮ ಸುತ್ತಲಿನ ಜನಾಂಗಗಳ ಬೆಳೆಯುತ್ತಿರುವ ದಬ್ಬಾಳಿಕೆ, ಇವುಗಳು ಬೇರೆ ಕಾರಣಗಳಾಗಿದ್ದವು. ಈ ಭಿನ್ನಹವು ಸಮುವೇಲನ ಹೃದಯವನ್ನು ಕದಡಿತು; ಅದಕ್ಕೆ ಕಾರಣ ಅವನಿಗೆ ಅವರು ಕೃತಜ್ಞತೆ ತೋರಿಸುವವರಾಗಿರದೇ ಇರುವುದು. ಆದರೆ ತನ್ನ ಸರ್ವಶಕ್ತ ಅರಸನಂತೆ ಯೆಹೋವನಿಗೆ ತಮ್ಮ ನಿಷ್ಠೆಯಿಲ್ಲದಿರುವುದನ್ನು ಮುಖ್ಯವಾಗಿ ಪ್ರಕಟಿಸಿದ್ದು. ಹೀಗಿದ್ದರೂ ಅವರ ಪಾಪವು ಅವರ ಕೃತಿಯಲ್ಲಿರಲಿಲ್ಲ ಆದರೆ ಉದ್ದೇಶದಲ್ಲಿತು; ಮತ್ತು ಅವನು ಒಪ್ಪಿಕೊಳ್ಳಲು ದೇವರಿಂದ ನಿರ್ದೇಶಿಸಲ್ಪಟ್ಟನು. ಯೆಹೋವನಿಗೆ ನಿಷ್ಠೆಯುಳ್ಳವನಾಗಿ,

ತನ್ನನ್ನು ಬದಿಗಿಟ್ಟುಕೊಳ್ಳುವ ಮತ್ತು ರಾಜ್ಯಾಧಿಪತ್ಯವು ಪ್ರಾರಂಭವಾಗಲು ಕ್ರಮ ತೆಗೆದುಕೊಂಡನು.

## II. ಸೌಲನ ಆಳ್ವಿಕೆ.

## (ಕ್ರಿ.ಪೂ. 1095-1055. 1 ಸಮುವೇಲ 11-31.)

**1. ಸೌಲನ ಆಯ್ಕೆ.**-*a. ಅವನ ಪ್ರತ್ಯೇಕ ಅಭಿಷೇಕ.*-ಸೌಲನು ಬೆನ್ಯಾಮಿನ್ ಕುಲದ ಕೀಷನ ಮಗನಾಗಿದ್ದನು. ಒಂದು ದಿನ ತನ್ನ ತಂದೆಯ ಕತ್ತೆಗಳನ್ನು ಹುಡುಕಲಿಕ್ಕೆ ಹೋದಾಗ, ಅವನು ಪ್ರವಾದಿ ಸಮುವೇಲನನ್ನು ಸಂದರ್ಶಿಸಿದನು. ಸಂದರ್ಶನದ ಫಲವು ಸಮುವೇಲನು ದೈವಿಕ ನಿದರ್ಶನದಿಂದ ಸೌಲನನ್ನು ಅರಸನನ್ನಾಗಿ ಅಭಿಷೇಕಿಸುತ್ತಾನೆ.

*b. ಅವನ ಬಹಿರಂಗ ಆಯ್ಕೆ.*-ಸಮುವೇಲನು ಇದಾದನಂತರ ಬೇಗನೇ ಮಿಚ್ಪೆಯಲ್ಲಿ ಜನರನ್ನು ಒಂದಾಗಿ ಕರೆದನು. ಅವರು ಪರಿಶುದ್ಧ ಚೀಟು ಹಾಕಿ ಆಯ್ಕೆ ಮಾಡಿದರು. ಸಲಕರಣೆಗಳಲ್ಲಿ ಅಡಗಿಕೊಂಡಿದ್ದ ಸೌಲನ ಪಾಲಿಗೆ ಚೀಟು ಬಂದಿತು. ಅವನ ಎತ್ತರದ ನಿಲುವು ಬಂದಾಗ ಕೂತುಹಲವೇರ್ಪಟ್ಟಿತ್ತು. ಹೀಗಿದ್ದರೂ ಕೆಲವರು ಅವನ ಬಗ್ಗೆ "ತಿರಸ್ಕಾರ" ವ್ಯಕ್ತಪಡಿಸಿದರು. ಸೌಲನು ಇದನ್ನು ಮೌನವಾಗಿ ಸಹಿಸಿಕೊಂಡನು. ಕೆಲವು ಅರಸುತನದ ಕಾರ್ಯಗಳಿಂದ ಜಯಹೊಂದಿ ತನ್ನ ಪರಿಚಯ ಮಾಡಿಕೊಡುವ ಅವಕಾಶಕ್ಕಾಗಿ ಕಾದುಕೊಂಡಿದ್ದನು.

*c. ಅಮ್ಮೋನಿಯರ ಸೋಲು.*-ಅವನ ಅವಕಾಶವು ಬೇಗನೇ ಬಂದಿತು. ಅಮ್ಮೋನಿಯರು ಯಾಬೇಷ್ - ಗಿಲ್ಯಾದಕ್ಕೆ ಮುತ್ತಿಗೆ ಹಾಕಿದರು, ಸಹಾಯಕ್ಕಾಗಿ ಅದರ ಜನರು ಸೌಲನನ್ನು ಬೇಡಿಕೊಂಡರು, ಅವನು ಒಂದು ಜೋಡಿ ಎತ್ತುಗಳನ್ನು ಕಡಿದು, ಹನ್ನೆರಡು ತುಂಡುಗಳನ್ನು ಮಾಡಿ ಪ್ರತಿಯೊಂದು ಕುಲಕ್ಕೆ ಒಂದೊಂದು ತುಂಡನ್ನು ಕಳುಹಿಸಿದನು ಮತ್ತು ತಮ್ಮ ಎತ್ತುಗಳಿಗೆ ಇದೇ ಗತಿ ಬರುವುದು ಎಂದು ಎಚ್ಚರಿಸಿ ಯುದ್ಧ ಮಾಡಬಲ್ಲ ಜನರನ್ನು ಸಂಗ್ರಹಿಸಿದನು. ಮೂರು ಲಕ್ಷ ಜನ ಇಸ್ರಾಯೇಲ್ಯರು ಅವನ ಬಳಿಗೆ ಬಂದರು ಮತ್ತು ಸೌಲನು ವೈರಿಯ ಮೇಲೆ ಫಕ್ಕನೇ ಬಿದ್ದು, ಹೊಟ್ಟಿನಂತೆ ಅವರನ್ನು ಚದರಿಬಿಟ್ಟನು.

*d. ಗಿಲ್ಗಾಲಿನಲ್ಲಿ ಪಟ್ಟಾಭಿಷೇಕ.*-ಸೌಲನ ಜಯವು ವಿರೋಧಿಗಳನ್ನು ಮೌನ ವಾಗಿರಿಸಿತು, ಮತ್ತು, ಗಿಲ್ಗಾಲಿನಲ್ಲಿ ಏರ್ಪಡಿಸಿದ ಕುಲಗಳ ಇನ್ನೊಂದು ಸಮ್ಮೇಳನದಲ್ಲಿ ಅವನು ಇಸ್ರಾಯೇಲಿನ ಅರಸನೆಂದು ಉಲ್ಲಾಸದಿಂದ ಕಿರೀಟದಾರಣೆ ಮಾಡಿಕೊಂಡನು.

**2. ಸೌಲನು ತಿರಸ್ಕರಿಸಲ್ಪಡುವವರೆಗೆ ಅವನ ಆಳ್ವಿಕೆ.**-*a. ಸ್ವಾತಂತ್ರ್ಯದ ಯುದ್ಧ.* -ಸಮುವೇಲನ ನೇತೃತ್ವದಲ್ಲಿ ಇಸ್ರಾಯೇಲ್ಯರು ಎಬೆನೆಜರಿನಲ್ಲಿ ಫಿಲಿಷ್ಟಿಯರ ಮೇಲೆ ಜಯಸಾಧಿಸಿದರು, ಆದರೆ ಎಂದೂ ಸಂಪೂರ್ಣವಾಗಿ ತಾವು ಅವಲಂಭಿಸಿದ್ದರಿಂದ ಹೊರಬಂದಿರಲಿಲ್ಲ; ಮತ್ತು ಇತ್ತೀಚೆಗೆ, ಇಸ್ರಾಯೇಲ್ಯರನ್ನು ಶಸ್ತ್ರಾಸ್ತ್ರ ಇಲ್ಲದವರನ್ನಾಗಿ ಮಾಡಿ ಫಿಲಿಷ್ಟಿಯರು ಮೊದಲಿಗಿಂತ ಇನ್ನೂ ಹೆಚ್ಚಾಗಿ ಸರಪಣಿಗಳನ್ನು ಬಿಗಿಮಾಡಲು ಹುಡುಕಿದರು. ಸೌಲನು ತನ್ನ ಸಿಂಹಾಸನದಲ್ಲಿ ಭದ್ರನಾದನೆಂದು ಭಾವಿಸಿದ ಕೂಡಲೇ, ಈ ಅಪಮಾನಗೊಳಿಸುವ ಅವಲಂಭಿಸುವಿಕೆಯನ್ನು ಅಂತ್ಯಗೊಳಿಸಲು ನಿರ್ಣಯಿಸಿಕೊಂಡನು. ಯುದ್ಧದ ಅತೀ ಸ್ಮರಣೀಯವಾದ ಘಟನೆಯು ಮಿಕ್ಮಾಷಿನಲ್ಲಿ ಜಯಸಾಧಿಸಿದ್ದು. ಸೌಲನ ಮಗ ಯೋನತಾನನು, ತನ್ನ ಆಯುಧ ಹೋರುವ

ವನೊಂದಿಗೆ, ಕೆಲವು ದಿನ್ನೆಗಳನ್ನು ಹತ್ತಿ, ತಕ್ಷಣವೇ ಫಿಲಿಷ್ಟಿಯರನ್ನು ಹೊಡೆದು, ಅವರನ್ನು ಗಲಿಬಿಲಿಪಡಿಸಿದನು. ಸೌಲನು ಅವಕಾಶವನ್ನು ಉಪಯೋಗಿಸಿ ಅವರನ್ನು ಹುಚ್ಚುಹಿಡಿದವರಂತೆ ಸಮಭೂಮಿಗೆ ಓಡಿಸಿಬಿಟ್ಟನು.

*b. ಸೌಲನ ಇತರ ಯುದ್ಧಗಳು.*-ಹಲವಾರು ದೇಶಗಳು ಇಸ್ರಾಯೇಲಿನ ಮೇಲೆ ಪ್ರತಿಯೊಂದು ದಿಕ್ಕಿನಿಂದ ಒತ್ತಡ ತರುತ್ತಿದ್ದವು, ಮತ್ತು ಸೌಲನು, ಮೋವಾಬ್, ಅಮ್ಮೋನ್, ಎದೋಮ್ ಮತ್ತು ಜೋಬಾ, ಉತ್ತರ ಪೂರ್ವದಲ್ಲಿಯ ಸಿರಿಯನ್ ರಾಜ್ಯ ಇವುಗಳ ವಿರುದ್ಧವಾಗಿ ಯಶಸ್ವೀ ಯುದ್ಧಗಳನ್ನು ಮಾಡಿದನು.

*c. ಸೌಲನು ತಿರಸ್ಕರಿಸಲ್ಪಟ್ಟದ್ದು.*-ಅನೇಕ ಜನರಂತೆ, ಸೌಲನು ತನ್ನ ಹುದ್ದೆಯಲ್ಲಿ ಕೆಟ್ಟು ಹೋದನು. ಇಸ್ರಾಯೇಲಿನ ನಿಜವಾದ ಅರಸನ ಕೇವಲ ಭೂಲೋಕದ ಪ್ರತಿನಿಧಿ ತಾನಾಗಿರುವೆನೆಂಬುದನ್ನು ಅವನು ಮರೆತುಬಿಟ್ಟನು. ಯೆಹೋವನಿಗೆ ಅವನು ನಿಷ್ಠೆಯಿಲ್ಲದವನಾದನು. ಸ್ವಚಿತ್ತನೂ ಅವಿಧೇಯನೂ ಆದನು. ಅಮಾಲೇಕ ವನ್ನು ನಾಶಪಡಿಸಲು ಕಳುಹಿಸಲ್ಪಟ್ಟನು, ಅರಸ ಆಗಾಗನನ್ನು ಬಹುಮಾನದಂತೆ ಉಳಿಸಿಕೊಂಡನು ಮತ್ತು ಯೆಹೋವನಿಗೆ ಯಜ್ಞ ಅರ್ಪಿಸಲು ಅತ್ಯುತ್ತಮವಾದ ಕುರಿದನಗಳನ್ನು ಉಳಿಸಿಟ್ಟುಕೊಂಡನು. ಅಂದಿನ ಅವಿಧೇಯತೆಯ ದಿನದಿಂದ ಅವನು ದೇವರಿಂದ ತಳ್ಳಲ್ಪಟ್ಟನು ಮತ್ತು ಸಮುವೇಲನಿಂದ ತ್ಯಜಿಸಲ್ಪಟ್ಟನು.

**3. ಸೌಲನ ಅವನತಿ ಮತ್ತು ದಾವೀದನ ಏಳುವಿಕೆ.**-ಸೌಲನ ಆಳ್ವಿಕೆಯ ಉಳಿದ ಭಾಗವು ಯೋಗ್ಯವಾಗಿ ದಾವೀದನ ಚರಿತ್ರೆಯೊಳಗೆ ಬೀಳುತ್ತದೆ. ದಾವೀದನು ಅರಸನಾಗಿ ಸಮುವೇಲ ನಿಂದ ಪ್ರತ್ಯೇಕವಾಗಿ ಅಭಿಷೇಕಿಸಲ್ಪಟ್ಟನು; ಅರಸನ ಖಿನ್ನತೆಯನ್ನು ಶಾಂತಪಡಿಸಲು ಸೌಲನು ಆಸ್ಥಾನಕ್ಕೆ ಕರೆಯಲ್ಪಟ್ಟನು; ಫಿಲಿಷ್ಟಿಯರೊಂದಿಗಿನ ಅನಂತರದ ಯುದ್ಧದಲ್ಲಿ ಧೈತ್ಯ ಗೊಲ್ಯಾತನನ್ನು ಕೊಂದನು; ಜನರ ಮೆಚ್ಚಿಕೆಯನ್ನೂ ಮತ್ತು ಸೌಲನ ಹುಚ್ಚು ಮತ್ಸರವನ್ನೂ ಪಡೆದುಕೊಂಡನು. ಸೌಲನು ಎರಡು ಸಲ ತನ್ನ ಕೈಗಳಿಂದ ದಾವೀದನನ್ನು ಕೊಲ್ಲಲು ಪ್ರಯತ್ನಿಸಿದನು; ತನ್ನ ಮಗಳನ್ನು ಮದುವೆಯಲ್ಲಿ ಕೊಡುವದರಿಂದ ದಾವೀದ ನನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸಿದನು, ಅಂತಿಮವಾಗಿ ಓಡಿಹೋದವನ ಜೀವಿತ ಜೀವಿಸಲು ಓಡಿಸಿದನು ಮತ್ತು ಹಲವಾರು ವರ್ಷ ಒಂದು ಅಡಗು ತಾಣದಿಂದ ಇನ್ನೊಂದು ಅಡಗು ತಾಣಕ್ಕೆ ಬೆನ್ನಟ್ಟಿ ಹೋದನು. ಫಿಲಿಷ್ಟಿಯರೊಂದಿಗೆ ಇನ್ನೊಂದು ಹೊಸ ಯುದ್ಧದಲ್ಲಿ ತನ್ನ ಹಣೇಬರಹವನ್ನು ತಿಳಿದುಕೊಳ್ಳಲು ಎಂದೋರಿನ ಯಕ್ಷಿಣಿಯ ಬಳಿಗೆ ಹೋದನು. ಮರುದಿನ ಗಿಲ್ಬೋವನ ಯುದ್ಧದಲ್ಲಿ ಇಸ್ರಾಯೇಲು ಸೋತು ಹೋಯಿತು. ಸೌಲನು ಗಂಡುಮಕ್ಕಳು ಕೊಲ್ಲಲ್ಪಟ್ಟರು, ಫಿಲಿಪ್ಪೆದಲ್ಲಿ ಬ್ರೂಟಸ್ ಮತ್ತು ಕಾಸ್ಸಿಯಸ್ಸಿರಂತೆ, ಸೌಲನು ತನ್ನ ಸ್ವಂತ ಖಡ್ಗದಿಂದಲೇ ಸತ್ತುಹೋದನು. ಯಾಬೇಷ - ಗಿಲ್ಯಾದಿನಲ್ಲಿ ವೈಭವದಿಂದ ಉದಯವಾದ ಸೂರ್ಯನು ಗಿಲ್ಬೋಮದ ಮಬ್ಬಿನಲ್ಲಿ ಹೀಗೆ ಮುಳಿಗಿ ಹೋದನು.

**4. ಸೌಲನು ಆಳ್ವಿಕೆಯ ವಿಶಿಷ್ಟತೆಗಳು.**-ಸೌಲನು ಪಟ್ಟಣಗಳನ್ನು ಕಟ್ಟಿದವನಲ್ಲ. ರಾಜ ಕೀಯ ಸಂಘಟನಾಕಾರನಲ್ಲ, ಸಾಹಿತ್ಯದ ಘೋಷಕನಲ್ಲ. ಇಲ್ಲವೇ ನಿಜವಾದ ಧರ್ಮವನ್ನು ಪ್ರಸಾರ ಮಾಡಿದವನೂ ಅಲ್ಲ. ಅವನು ಒಬ್ಬ ಮಿಲಿಟರಿ ಹವ್ಯಾಸಿ, ಜನಾಂಗವು ಬಿದ್ದುಹೋಗುವ ಸಮಯದಲ್ಲಿದ್ದಾಗ ಅವನು ಬಹಳ ಕಾರ್ಯ ಮಾಡಿದವನು. ನೆರೆಯ ವರಲ್ಲಿ ಮಿಲಿಟರಿ ಮಟ್ಟವನ್ನು ಅದಕ್ಕೆ ಒದಗಿಸಿಕೊಟ್ಟನು. ಹೀಗೆ ಅವನು ಜನರಿಗೆ ಮೆಚ್ಚಿಕೆಯಾದವನಾಗಿದ್ದನು. ಆದರೆ ಅವನು ಹೆಚ್ಚು ಸ್ವಾರ್ಥ ಚಿತ್ತವುಳ್ಳವನೂ, ದೇವರಾಡಳಿತೆ ಯಲ್ಲಿ ದೇವರ ಉದ್ದೇಶವನ್ನು ನೆರವೇರಿಸಲು ಯೆಹೋವನಿಗೆ ನಿಷ್ಠೆಯಿಲ್ಲದಷ್ಟು ಬೆಳೆ ದನು. ಜನಾಂಗಿಕ ಧ್ಯೇಯಕ್ಕೆ ನಿಜವಾಗಿರುವ ಒಬ್ಬನಿಗೆ, ದೇವರ ಸ್ವಂತ ಹೃದಯಕ್ಕೆ

ನಿಷ್ಠನಾದ ಮನುಷ್ಯನಿಗೆ ಮಾರ್ಗಮಾಡಲು ಸೌಲನು ತೆಗೆದು ಹಾಕಲ್ಪಟ್ಟನು.

## III. ದಾವೀದನ ಜೀವನ ಮತ್ತು ಆಳ್ವಿಕೆ.

### (ಕ್ರಿ.ಪೂ. 1055-1015. 1 ಸಮುವೇಲ 16-31; 2 ಸಮುವೇಲ; 1 ಅರಸುಗಳು 1-11:11; 1 ಪೂರ್ವಕಾಲವೃತ್ತಾಂತ 11-29.)

**ಚರಿತ್ರೆಯಲ್ಲಿ ದಾವೀದನ ಸ್ಥಾನ.**-ಅಬ್ರಹಾಮ, ಮೋಶೆ, ದಾವೀದ - ಹಳೇ ಒಡಂಬಡಿಕೆಯ ಚರಿತ್ರೆಯಲ್ಲಿ ಇವು ಮೂರು ದೊಡ್ಡ ಹೆಸರುಗಳಾಗಿರುತ್ತವೆ. ಅಬ್ರಹಾಮನು ಸ್ಥಾಪಕನು, ಮೋಶೆಯು ಧರ್ಮಶಾಸ್ತ್ರ ಕೊಟ್ಟವನು; ದಾವೀದನು ಸರ್ವಶ್ರೇಷ್ಠ ಅರಸನಾಗಿದ್ದನು. ಅವನ ಆಳ್ವಿಕೆಯು ಜನಾಂಗಿಕ ಬಲ ಮತ್ತು ಸಮೃದ್ಧಿಯಲ್ಲಿ ಔನ್ನತ್ಯಕ್ಕೇರಿದ ಗುರುತನ್ನು ಹೊಂದಿದೆ. ಆದರೆ ದಾವೀದನು ಅರಸನಿಗಿಂತ ಹೆಚ್ಚಾದವನಾಗಿದ್ದನು; ಅವನು ತನ್ನ ಜನಾಂಗದ ಕವಿಯಾಗಿದ್ದನು. ಮೋಶೆಯ ನಂತರ, ದಾವೀದನ ಜೀವನ ಮತ್ತು ಬರಹಗಳು ಹಿಬ್ರು ಸಾಹಿತ್ಯದಲ್ಲಿ ಅತೀ ದೊಡ್ಡ ಸ್ಥಳವನ್ನು ಪಡೆದು ಕೊಂಡಿರುತ್ತದೆ. ಹಳೇ ಒಡಂಬಡಿಕೆಯ ಯಾವುದೇ ವ್ಯಕ್ತಿಗಿಂತ ಹೆಚ್ಚಾದದ್ದನ್ನು ಅವನ ವೈಯಕ್ತಿಕ ಚರಿತ್ರೆಯಲ್ಲಿ ನಾವು ನೋಡಿದ್ದೇವೆ. ಅವನ ಜೀವನದ ಮತ್ತು ಆಳ್ವಿಕೆಯ ಘಟನೆಗಳು ಈ ಕೆಳಗಿನ ಐದು ಹಂತಗಳಲ್ಲಿ ಕ್ರೋಢೀಕರಿಸಲ್ಪಡಬಹುದು:

**1. ಹಂತ I.-ಬೇತ್ಲೆಹೇಮಿನಲ್ಲಿ ಕುರುಬನ ಜೀವಿತ.**-*a. ಜನನದ ಸ್ಥಳ ಮತ್ತು ಕುಟುಂಬ.* -ದಾವೀದನು ಇಷಯನ ಮಗನು ಮತ್ತು ಬೋವಜ ಹಾಗೂ ರೂತಳ ಮರಿಮಗನು. ಅವನು ಒಳಗೊಂಡಿದ್ದ ಯೆಹೂದ ಗೋತ್ರವು ಯಾಕೋಬನ ಪಿತೃ ಆಶೀರ್ವಾದದಲ್ಲಿ (ಆದಿಕಾಂಡ 49:8-12) ರಾಜಕುಲವೆಂದು ಹೇಳಲ್ಪಟ್ಟಿದ್ದರೂ ಅದು ತನ್ನನ್ನು ಪ್ರತ್ಯೇಕಿಸಿ ತೋರಿಸಲ್ಪಡಲು ಇನ್ನೂ ಏನನ್ನು ಮಾಡಿರಲಿಲ್ಲ. ದಾವೀದನು ಬೇತ್ಲೆಹೇಮಿನಲ್ಲಿ ಜನಿಸಿದ್ದನು, ಅದು ಗಣನೆಗೆ ಬಾರದ ಒಂದು ಗ್ರಾಮವಾಗಿತ್ತು. ಆದಾಗ್ಯೂ ಎಂದೆಂದಿಗೂ ಪರಿಶುದ್ಧವಾದದ್ದಾಗಿತ್ತು. ಅವನ ಮೊದಲಿನ ಸ್ವಂತ ಮನೆಯಂತೆ ಅಷ್ಟೇ ಅಲ್ಲ, ಆದರೆ ಅವನ ಹೆಚ್ಚು ದೊಡ್ಡ ಮಗನ ಜನನದ ಸ್ಥಳದಂತೆ ಪ್ರಸಿದ್ಧವಾಯಿತು.

*b. ಅವನ ಉದ್ಯೋಗ.*-ದಾವೀದನು ಒಬ್ಬ ಕುರುಬನು. ಒಬ್ಬ ದೀನನು ಆದರೆ ಗೌರವದ ಕರೆಹೊಂದಿದವನು ಮತ್ತು ಧೈರ್ಯಕ್ಕಾಗಿಯೂ ಜಾಗರೂಕತೆಗಾಗಿಯೂ ಕರೆಯಲ್ಪಟ್ಟವನು. ಅವನ ಯೌವನಪ್ರಾಯದ ದಾಖಲೆಯಾದ ಸಾಹಸಗಳಲ್ಲಿ, ತನ್ನ ಕುರಿಮಂದೆಯನ್ನು ಕಾಪಾಡುವುದಕ್ಕಾಗಿ ಒಂದು ಸಿಂಹವನ್ನೂ ಒಂದು ಕರಡಿಯನ್ನೂ ಸೀಳಿ ಹಾಕಿದ್ದು. ಅವನ ಕೀರ್ತನೆಗಳಲ್ಲಿ ಅನೇಕವು ಅವನ ಹೊರಗಿನ ಕುರುಬ ಜೀವಿತ ಗುರುತುಗಳನ್ನು ತೋರಿಸುತ್ತವೆ.

*c. ಅವನ ರಹಸ್ಯವಾದ ಅಭಿಷೇಕ.*-ಸೌಲನು ತಿರಸ್ಕರಿಸಲ್ಪಟ್ಟ ನಂತರ, ಸಮುವೇಲನು ಅವನ ಉತ್ತರಾಧಿಕಾರಿಯಾಗಲು ಇಷಯನ ಒಬ್ಬ ಮಗನನ್ನು ಅಭಿಷೇಕಿಸಲು ಕಳುಹಿಸಲ್ಪಟ್ಟನು. ಅವನು ಹಿರಿಯವನಾದ ಎಲಿಯಾಬನು ನೋಟದಿಂದ ಪ್ರಭಾವಿತ ವಾದನು. ಸಮುವೇಲನು ಸಹ ನೋಟದ ವೈಭವವಲ್ಲ ಆದರೆ ಹೃದಯದ ಐಕ್ಯತೆಯು ಉನ್ನತ ವಿಶ್ವಾಸಕ್ಕಾಗಿ ಮನುಷ್ಯನಿಗೆ ಒಪ್ಪುತ್ತವೆ ಎಂಬ ಸತ್ಯವನ್ನು ಮರೆತಂತೆ ಕಾಣುತ್ತದೆ. ಸೌಲನು ಮನುಷ್ಯರಿಗೆ ಮೆಚ್ಚಿಕೆಯಾದವನಾಗಿದ್ದನು. ನೋಟದಲ್ಲಿ ಆಕರ್ಷಣೀ ಯನಾಗಿದ್ದನು, ಯುದ್ಧವೀರನು, ಅದಕ್ಕಿಂತ ಸ್ವಲ್ಪ ಹೆಚ್ಚಾಗಿದ್ದನು. ಒಬ್ಬರ ನಂತರ ಒಬ್ಬರು ಇಷಯನ ಮಕ್ಕಳು ಎದುರಿಗೆ ಬಂದರು ಆದರೆ ತಿರಸ್ಕರಿಸಲ್ಪಟ್ಟರು. ದಾವೀದನು ಬಂದನು. ಅವನು "ದೇವರಿಗೆ ಮೆಚ್ಚಿಕೆಯಾದ" ಮನುಷ್ಯನಾಗಿದ್ದನು. ಇಸ್ರಾಯೇಲಿನ

ನಿಜವಾದ ಅರಸ ಯೆಹೋವನಿಗೆ ಅವನು ನಿಷ್ಠೆಯಿಂದ ಇರುವನು. ಅಭಿಷೇಕವು ಪ್ರತ್ಯೇಕವಾಗಿತ್ತು ಮತ್ತು ಬಹುಶಃ ಕುಟುಂಬದಲ್ಲಿಯೂ ಸಂಪೂರ್ಣವಾಗಿ ಅರ್ಥವಾಗಲಿಲ್ಲ.

*d. ಸೌಲನಿಗೆ ವಾದ್ಯಗಾರ.*-"ಕೂಡಲೇ ಕರ್ತನ ಆತ್ಮವು ದಾವೀದನ ಮೇಲೆ ಬಂದು ನೆಲೆಗೊಂಡಿತು."[1] "ಯೆಹೋವನ ಆತ್ಮವು ಸೌಲನನ್ನು ಬಿಟ್ಟು ಹೋಯಿತು; ಯೆಹೋವನು ಕಳುಹಿಸಿದ ದುರಾತ್ಮವು ಬಂದು ಅವನನ್ನು ಪೀಡಿಸಿತು" (1 ಸಮುವೇಲ 16:14). ದಾವೀದನ ಅಭಿಷೇಕದ ವಿವರಣೆಯನ್ನು ಹಿಂಬಾಲಿಸಿದ, ವ್ಯಕ್ತಪಡಿಸಲ್ಪಟ್ಟ ದಾಖಲೆಯು ಇಂಥದ್ದಾಗಿದೆ. ಒಂದು ವಾಡಿಕೆಯ ಪ್ರಕಾರ, ಪುರಾತನ ಸಮಯಗಳಲ್ಲಿ ಸಾಮಾನ್ಯವಾದದ್ದು, ಸೌಲನ ಆಸ್ಥಾನದವರು ಅವನ ತೊಂದರೆಗೊಳಗಾದ ಮತ್ತು ಕತ್ತಲೆಯಾದ ಆತ್ಮಕ್ಕೆ ವಾದ್ಯ ಬಾರಿಸುವುದರಿಂದ ಶಮನ ತರಲು ಹುಡುಕಿದರು, ಯುವಕ ದಾವೀದನು, ಈಗಾಗಲೇ ಪ್ರಸಿದ್ಧ ವಾದ್ಯಗಾರನಾಗಿದ್ದನು, ಅರಸನ ಆಸ್ತಾನಕ್ಕೆ ವಾದ್ಯ ಬಾರಿಸುವವನಾಗಿ ತರಲ್ಪಟ್ಟನು. ಹೀಗಿದ್ದರೂ ಆಸ್ಥಾನದಲ್ಲಿ ಅವನು ಇದ್ದದ್ದು ಕೇವಲ ತಾತ್ಕಾಲಿಕವಾಗಿತ್ತು ಇಲ್ಲವೇ ಸಂದರ್ಭಕ್ಕೆ ಅನುಗುಣವಾಗಿತ್ತು, ಯಾಕಂದರೆ ನಾವು ಅವನನ್ನು ಪುನಃ ಅವನ ತಂದೆಯ ಮಂದೆಗಳೊಂದಿಗೆ ಸಂದರ್ಶಿಸುತ್ತೇವೆ.

*e. ಗೊಲ್ಯಾತನೊಂದಿಗೆ ದಾವೀದನ ಯುದ್ಧ.*-ಸೌಲನು ಬೇಗನೇ ಇನ್ನೊಂದು ಫಿಲಿಷ್ಟಿಯರೊಂದಿಗೆ ಯುದ್ಧದಲ್ಲಿ ತೊಡಗಿದನು. ನಾಲ್ವತ್ತು ದಿನಗಳವರೆಗೆ ಗೊಲ್ಯಾತ ಎಂಬ ಹೆಸರಿನ ದೈತ್ಯನು ಒಬ್ಬಂಟಿಗನಾಗಿಯೇ ಯುದ್ಧ ಎದುರಿಸಲು ಬರಬೇಕೆಂದು ಆಹ್ವಾನಿಸುತ್ತಿದ್ದನು, ಆದರೆ ಅವನೊಂದಿಗೆ ಯುದ್ಧ ಮಾಡಲು ಇಸ್ರಾಯೇಲಿನ ಯಾವ ಸಾಹಸಿಯೂ ಮುಂದೆ ಬರಲಿಲ್ಲ. ಯುವಕನಾದ ದಾವೀದನು ಸೈನ್ಯದಲ್ಲಿದ್ದ ತನ್ನ ಸಹೋದರರನ್ನು ವಿಚಾರಿಸಿಕೊಂಡು ಬರಲು ಬಂದನು, ಆಹ್ವಾನವನ್ನು ಸ್ವೀಕರಿಸಿದನು ಯಾವುದೇ ಆಯುಧವಿಲ್ಲದೇ ತನ್ನ ಕವಣೆಯೊಂದಿಗೆ, ಯೆಹೋವನಲ್ಲಿ ನಂಬಿಕೆ ಯೊಂದಿಗೆ. ದೃಢಶಾಲಿ ಫಿಲಿಷ್ಟಿಯನನ್ನು ಕೊಂದು ಹಾಕಿದನು. ಇಸ್ರಾಯೇಲ್ಯರಿಗೆ ಜಯವಾಯಿತು. ದಾವೀದನ ಧೈರ್ಯದ ಕಾರ್ಯಕ್ಕೆ ಎರಡು ಪರಿಣಾಮಗಳಾ ದವು: ಸೌಲನ ಮಗ, ಯೊನಾತಾನನೊಂದಿಗೆ ದಾವೀದನ ಪ್ರಾಣವು ಒಂದಾಯಿತು, ಸ್ನೇಹ ಬಲಪಟ್ಟಿತು, ಮತ್ತು ದಾವೀದನು ಸೌಲನ ಮಿಲಿಟರಿ ಮನೆತನದ ಸದಸ್ಯನಾದನು.

**2. ಹಂತ II.-ಸೌಲನ ಅರಮನೆಯಲ್ಲಿ ದಾವೀದನ ಜೀವನ.**-*a. ಸೌಲನ ಅಸೂಯೆ.*-ಯುದ್ಧ ದಿಂದ ಸೈನ್ಯವು ಹಿಂದಿರುಗಿ ಬಂದ ತರುವಾಯ ಮಹಿಳೆಯರು ಮೆರವಣಿಗೆಯಲ್ಲಿ ಜಯದಿಂದ ಹೋಗುತ್ತಾ ಹೀಗೆ ಹಾಡುತ್ತಿದ್ದರು: "ಸೌಲನು ಸಾವಿರಗಟ್ಟಳೆಯಾಗಿ ಕೊಂದನು; ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು"[2] ಎಂದು. ಸೌಲನು ತಾನು ತಿರಸ್ಕರಿಸಲ್ಪಟ್ಟ ಅರಸನು ಎಂದು ತಿಳಿದುಕೊಂಡನು, ಮತ್ತು ಸಂಶಯವಿಲ್ಲದೆ ದಾವೀದನು ಬರಲಿಕ್ಕಿದ್ದ ಮನುಷ್ಯನೆಂದು ಸಂಶಯಪಡಲು ಪ್ರಾರಂಭಿಸಿದನು. "ಅಂದಿನಿಂದ ಸೌಲನು ದಾವೀದನ ಮೇಲೆ ಕಣ್ಣಿಟ್ಟನು."[3]

ದಾವೀದನು ಸಭ್ಯತೆಯಿಂದ ಸಹಿಸಿಕೊಂಡನು, ಆದರೆ ಅವನ ಪ್ರಸಿದ್ಧಿಯು ಸೌಲನ ಮತ್ಸರದ ಜ್ವಾಲೆಯನ್ನು ತೂರಿಬಿಡುವಂತೆ ಮಾಡಿತು. ದಾವೀದನನ್ನು ಕೊಲ್ಲಲು ಸೌಲನು ಪುನಃ ಪುನಃ ಪ್ರಯತ್ನ ಮಾಡಿದನು; ಎರಡು ಸಲ ತನ್ನ ಸ್ವಂತ ಕೈಗಳಿಂದ, ಒಂದು ಸಲ ತನ್ನ ಆಸ್ಥಾನದವರು ಅವನನ್ನು ಕೊಲ್ಲುವಂತೆ ಒತ್ತಾಯಿಸಿದನು; ಆದರೆ ತನ್ನ ಮಗಳು ಮೀಕಲಳನ್ನು ಮದುವೆಯಲ್ಲಿ ಕೊಡುವುದರಿಂದ ಹಾಗೂ ಅದಕ್ಕಾಗಿ ವಧು ದಕ್ಷಿಣೆಯಂತೆ ಒಂದು ನೂರು ಜನ ಫಿಲಿಷ್ಟಿಯರನ್ನು ಕೊಲ್ಲಬೇಕೆಂದು ಹೇಳುವುದರಿಂದ ಅವನಿಗೆ ಬಲೆಹಾಕಲು ಹುಡುಕಿದನು, ಈ ಕಷ್ಟದ ಕಾಲದಲ್ಲೆಲ್ಲಾ, ಯೋನಾತಾನನು ದಾವೀದನೊಂದಿಗೆ ಸ್ನೇಹಿತನಾಗಿದ್ದನು, ಆದರೆ ತನ್ನ ತಂದೆ ಅವನನ್ನು ಕೊಲ್ಲಲು

ನಿರ್ಧರಿಸಿದ್ದಾನೆಂಬದನ್ನು ದೃಢಪಡಿಸಿಕೊಂಡು, ಅವನು ತಪ್ಪಿಸಿಕೊಂಡು ಹೋಗಲಿಕ್ಕೆ ಸಹಾಯ ಮಾಡಿದನು.

**3. ಹಂತ III.-ದಾವೀದನ ದೇಶಭ್ರಷ್ಟತೆಯ ಜೀವನ.**-ಹಲವಾರು ವರ್ಷಗಳವರೆಗೆ ದಾವೀದನು ದೇಶಭ್ರಷ್ಟನಾಗಿದ್ದನು. ಸೌಲನು ಅವನ ಬೆನ್ನಟ್ಟಿದ್ದನು, ತಾನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದವರಿಂದ ಅಲ್ಲಗಳೆಯಲ್ಪಟ್ಟಿದ್ದನು. ಎಲ್ಲಿಯೂ ಸುರಕ್ಷಿತತೆಯಿರಲಿಲ್ಲ. ಯೋಸೇಫನಂತೆ, ದೊಡ್ಡ ಆಲ್ಫ್ರೇಡನಂತೆ, ರೂಬರ್ಟ್ ಬ್ರೂಸನಂತೆ, ಅವನು ವಿಪತ್ತಿನ ಶಾಲೆಯಲ್ಲಿ ಸಿಂಹಾಸನಕ್ಕಾಗಿ ತರಬೇತಿಹೊಂದಿದನು. ಸೌಲನಿಂದ ಓಡಿಹೋದ ತರುವಾಯ ದಾವೀದನು ನೋಬನ್ನು ಸಂದರ್ಶಿಸಿದನು, ಅಲ್ಲಿ ದೇವರದರ್ಶನ ಗುಡಾರವಿದ್ದಂತೆ ತೋರುತ್ತದೆ ಮತ್ತು ಮೀಸಲಾಗಿಟ್ಟಿದ್ದ ರೊಟ್ಟಿಗಳನ್ನು ಯಾಜಕರಿಂದ ಪಡೆದು ತಿಂದನು ಹಾಗೂ ಗೊಲ್ಯಾತನ ಖಡ್ಗವನ್ನು ತೆಗೆದು ಕೊಂಡನು. ಅಲ್ಲಿಂದ ಫಿಲಿಷ್ಟಿಯರ ಪಟ್ಟಣವಾದ ಗಾತ್‌ಗೆ ಮುಂದುವರಿದನು. ಅದು ಅವನ ಹಿಂದಿನ ವೈರಿ ಯಾಗಿದ್ದ ಗೊಲ್ಯಾತನ ಊರಾಗಿತ್ತು, ಅಲ್ಲಿಯೂ ಅವನು ಸುರಕ್ಷಿತವಾ ಗಿರಲಿಲ್ಲ. ಯಾಕಂದರೆ ಫಿಲಿಷ್ಟಿಯರು ಬೇಗನೇ ಅವನ ಗುರುತನ್ನು ಹಿಡಿದರು. ಪಿಶ್ಚಿಮ ಯಹೂದದಲ್ಲಿ ಅದುಲ್ಲಾಮ ಗವಿಯಲ್ಲಿ ತನ್ನನ್ನು ಅಡಗಿಸಿಟ್ಟುಕೊಂಡನು. ಬೇಗನೇ ಧೈರ್ಯಶಾಲಿಗಳಾದ ಕೆಲವರ ಗುಂಪು ಕೂಡಿತು. ದೇಶಭ್ರಷ್ಟರಾದವರ ಗುಂಪಿಗೆ ಅವನು ನಾಯಕನಾದನು. ಸುರಕ್ಷಿತತೆಗಾಗಿ ತನ್ನ ವಯಸ್ಸಾದ ತಂದೆತಾಯಿಗಳನ್ನು ಯೊರ್ದನಿನ ಆಚೆ ಮೋವಾಬ ದೇಶಕ್ಕೆ ಕರೆದುಕೊಂಡು ಹೋದನು. ಮೃತ ಸಮುದ್ರದ ಪಶ್ಚಿಮ ಅಂಚಿನಲ್ಲಿಯ ಕಾಡು ಬೆಟ್ಟದ ಪ್ರದೇಶಕ್ಕೆ ಹಿಂದಿರುಗಿ ಬಂದನು. ಸೌಲನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬೆನ್ನಟ್ಟಿ ಹೋದನು. ಸೌಲನು ಎರಡು ಸಲ ದಾವೀದನ ಕೈಗೆ ಸಿಕ್ಕಿದನು. ಆದರೆ ದಾವೀದನು ಉದಾತ್ತ ಭಾವನೆಯಿಂದ ಅವನನ್ನು ಉಳಿಸಿದ್ದನು. ಕರ್ತನಿಂದ ಅಭಿಷೇಕಿಸಲ್ಪಟ್ಟವನಿಗೆ ವಿರುದ್ಧವಾಗಿ ತನ್ನ ಕೈಯೆತ್ತಲು ಬಯಸಲಿಲ್ಲ. ದೈವಿಕ ಆಯ್ಕೆ ಮತ್ತು ಅಭಿಷೇಕದ ಹಕ್ಕಿನಿಂದ ತಾನೇ ಅರಸನಾಗಿದ್ದರೂ ಅವನು ದೇವರ ಸಮಯಕ್ಕಾಗಿ ಕಾದುಕೊಂಡಿದ್ದನು. ಈ ಅವಧಿಯಲ್ಲಿ ಒಂದು ಸಂಗತಿಯು ಸಂಭವಿಸಿತು. ಅದು ದಾವೀದ ಮತ್ತು ಯೋನಾತನರ ಮಧ್ಯದಲ್ಲಿ ಹೃದಯ ಸ್ಪರ್ಶಿ ಸಂದರ್ಶನ. ಪರಿಸ್ಥಿತಿಗಳನ್ನು ಅವರನ್ನು ಸ್ವಾಭಾವಿಕವಾದ ವೈರಿಗಳನ್ನಾಗಿ ಮಾಡಿದವು, ಆದರೆ ಯಾವುದೇ ವಿರೋಧವು ಅಷ್ಟು ಸಾಹಸದ ಎರಡು ಪ್ರಾಣಗಳ ಸ್ನೇಹ ತ್ವಕ್ಕೆ ಗಂಡಾಂತರವನ್ನು ತರಲಾರದು, ಮತ್ತೊಮ್ಮೆ ದಾವೀದನು ಫಿಲಿಷ್ಟಿಯರ ಆಶ್ರಯಕ್ಕೆ ಹೋಗುತ್ತಾನೆ. ಅವರ ಅರಸ ಆಕೀಷನು ಅವನನ್ನು ದಯೆಯಿಂದ ಸ್ವೀಕರಿಸುತ್ತಾನೆ, ಆದರೆ ದಾವೀದನನ್ನು ಫಿಲಿಷ್ಟಿಯದ ಒಡೆಯರುಗಳು ಅಪನಂಬಿಕೆಯಿಂದ ನೋಡು ತ್ತಾರೆ; ಮತ್ತು ಸೌಲನೊಂದಿಗಿನ ಕೊನೆಯ ಯುದ್ಧದಲ್ಲಿ ಅವನ ಅಸೂಯೆಯು ಅವನನ್ನು ನೋವಿನ ಸಮಸ್ಯೆಯಿಂದ ಬಿಡುಗಡೆ ಮಾಡುತ್ತದೆ. ದಾವೀದನು ತನ್ನ ಸ್ವದೇಶದವರಿಗೆ ವಿರುದ್ಧವಾಗಿ ಭಾಗ ತೆಗೆದುಕೊಳ್ಳಬೇಕೆಂದು ಆಕೀಷನು ಬಯಸಿದನು. ಅಂತಿಮವಾಗಿ, ಸೌಲನು ಸೋಲು ಮತ್ತು ಗಿಲ್ಬೋವದಲ್ಲಿ ಅವನ ಮರಣವು ದಾವೀದನಿ ಗಾಗಿ ಸಿಂಹಾಸನಕ್ಕೆ ಮಾರ್ಗ ತೆರೆಯುತ್ತದೆ.

**4. ಹಂತ IV.-ಯೆಹೂದದ ಮೇಲೆ ಅರಸ; ನಾಗರಿಕ ಯುದ್ಧ.**-ಈ ಕಡಲುಗಳ್ಳ ನಂತಿರುವವನು ಯಾವ ರೀತಿಯ ಅರಸನಾಗುವನು? ಒಂದು ಅಸಭ್ಯ ರೀತಿಯವನು, ವೈಯಕ್ತಿಕ ವೈರಿಗಳ ಮೇಲೆ ಪ್ರತೀಕಾರ ತೆಗೆದುಕೊಳ್ಳುವವನು, ಇಡೀಯಾಗಿ ಮಟ್ಟಗೋಲು ಹಾಕಿ ಕೊಂಡವುಗಳಿಂದ ತನ್ನನ್ನು ಐಶ್ವರ್ಯವಂತನನ್ನಾಗಿ ಮಾಡಿಕೊಳ್ಳುವನೋ? "ದೇವರಿಗೆ ಮೆಚ್ಚಿಕೆಯಾದ ಮನುಷ್ಯನು" ಅಂಥವನಾಗಿರುವುದಿಲ್ಲ. ಅವನನ್ನು

ದೇಶಭ್ರಷ್ಟ ಹಾಗೂ ಸೆರೆಯಲ್ಲಿದ್ದವನು ಎಂದು ಗುರುತಿಸಿದ ಔದಾರ್ಯವು ಮತ್ತು ಸ್ವ - ನಿಯಂತ್ರಣವು ಅವನನ್ನು ಅರಸನಂತೆ ಗುಣಲಕ್ಷಣವುಳ್ಳವನಾಗಿ ಮಾಡಿತು. ಅನಂತರದ ಅವನ ವಿರೋಧಿಯನ್ನು ಅವನು ಉದಾರತೆಯಿಂದ ನೋಡಿದನು. ಯುದ್ಧ ಭೂಮಿಯಲ್ಲಿ ಸೌಲನನ್ನು ಕೊಂದೆನೆಂದು ಹೇಳಿದ್ದಕ್ಕೆ ಬಹುಮಾನ ಪಡೆಯಲು ನಿರೀಕ್ಷಿಸಿದ್ದ ಅಮಾಲೇಕ್ಯನನ್ನು ಮರಣಕ್ಕೆ ಒಪ್ಪಿಸಿದನು. ಸೌಲ ಮತ್ತು ಯೋನತಾನರ ಮೇಲೆ ಮೃದುವಾದ ಶೋಕಗೀತೆವನ್ನು ರಚಿಸಿದನು. ತನ್ನ ದೇಶಭ್ರಷ್ಟ ಜೀವನದ ಸಮಯದಲ್ಲಿ ದಾವೀದನು ತನ್ನ ಸ್ವಂತ ಯೆಹೂದ ಕುಲದ ನಾಯಕರ ಭರವಸೆಯನ್ನು ಗೆದ್ದುಕೊಳ್ಳುವಂತೆ ತನ್ನನ್ನು ಸಹಿಸಿಕೊಂಡನು ಮತ್ತು ಈಗ ಅವರು ಕೂಡಲೇ ಅವನನ್ನು ತಮ್ಮ ಅರಸನೆಂದು ಗುರುತಿಸಿಕೊಂಡರು. ಹೆಬ್ರೋನು ಪಿತೃಗಳ ಸಮಯದ ಹಳೇ ಪುರಾತನರ ಪಟ್ಟಣ ವಾಗಿತ್ತು. ಅಬ್ರಹಾಮನು ಅಲ್ಲಿ ವಾಸಿಸಿದ್ದನು; ಅಲ್ಲಿ ಇಸಾಕನು ಜನಿಸಿದ್ದನು, ಮತ್ತು ಅಲ್ಲಿ, ಮಕ್ಪೇಲದ ಗವಿಯಲ್ಲಿ, ಅಬ್ರಹಾಮ ಮತ್ತು ಸಾರಳು, ಇಸಾಕ ಮತ್ತು ರೆಬೆಕ್ಕಳು, ಯಾಕೋಬ ಮತ್ತು ಲೇಯಳು, ಹೂಣಿಡಲ್ಪಟ್ಟಿದ್ದರು. ದೇಶವನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ಅದು ಕಾನಾನ್ಯರ ರಾಜ್ಯಪಟ್ಟಣಗಳಲ್ಲಿ ಒಂದಾಗಿತ್ತು. ಇಲ್ಲಿ ದಾವೀದನು ತನ್ನ ರಾಜಧಾನಿಯನ್ನು ಮಾಡಿಕೊಂಡನು; ಯೆಹೂದದ ಜನರಿಂದ ಇಲ್ಲಿ ಅವನು ಬಹಿರಂಗವಾಗಿ ಅಭಿಷೇಕಿಸಲ್ಪಟ್ಟನು ಮತ್ತು ಇಲ್ಲಿ ಅವನು ಏಳುವರ್ಷಕ್ಕಿಂತ ಹೆಚ್ಚು ಸಮಯ ಒಂದು ಗೋತ್ರದ ಮೇಲೆ ಆಳ್ವಿಕೆ ಮಾಡಿದನು. ಇತರ ಗೋತ್ರಗಳು ಸೌಲನ ಮಗ ಇಷ್ಬೋಶೆತನಿಗೆ ಆಧೀನವಾಗಿದ್ದವು, ಅವನು ಬಲಹೀನನಾಗಿದ್ದು ಹೆಸರಿಗೆ ಮಾತ್ರ ಮುಖ್ಯಸ್ಥನಾಗಿದ್ದನು. ಅವನ ಸೇನಾಪತಿ ಅಬ್ನೇರನು ಅವನ ಎಲ್ಲಾ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದನು. ಯೊರ್ದನಿನ ಪಶ್ಚಿಮದಲ್ಲಿ ಮಹನೈಮ ಎಂಬುದು ಅವರ ರಾಜಧಾನಿಯಾಗಿ ಆಯ್ಕೆ ಮಾಡಲ್ಪಟ್ಟಿತು. ಮತ್ತು ಹನ್ನೊಂದು ಗೋತ್ರಗಳು ತಮ್ಮ ಹಿಂದೆ ಇರುವುದರೊಂದಿಗೆ ಏಳುವರ್ಷಗಳವರೆಗೆ ವಿರೋಧಿ ರಾಜ್ಯವನ್ನು ನಡಿಸಿಕೊಂಡು ಬಂದರು. ಏಳುವರ್ಷಗಳ ಸಿವಿಲ್‌ವಾರ್‌ದ ನಂತರ ಇಷ್ಬೋಶೆತನು ತನ್ನ ಸೇನಾಪತಿ ಅಬ್ನೇರನೊಂದಿಗೆ ಜಗಳವಾಡಿದನು. ಅಬ್ನೇರನು ಕೂಡಲೇ ಎಲ್ಲಾ ಗೋತ್ರಗಳು ದಾವೀದನ ಆಳ್ವಿಕೆಯೊಳಗೆ ಬರುವಂತೆ ಅವನೊಂದಿಗೆ ಸಂಧಾನ ಮಾಡಲು ಬಯಸಿದನು. ಅದು ಕಾರ್ಯರೂಪಕ್ಕೆ ಬರುವ ಮೊದಲು ದಾವೀದನ ಸೇನಾಪತಿ ಯೋವಾಬನಿಂದ ಅವನು ಕೊಲೆಮಾಡಲ್ಪಟ್ಟನು. ಅವನಿಗೆ ಅಬ್ನೇರನ ಮೇಲೆ ದ್ವೇಷವಿದ್ದಂತೆ ತೋರುತ್ತದೆ. ಅಬ್ನೇರನ ಮರಣದೊಂದಿಗೆ ವಿರೋಧಿ ರಾಜ್ಯವು ಪತನಗೊಂಡಿತು. ಮತ್ತು ದಾವೀದನು ಜಯಶಾಲಿಯಾಗಿ ಎಲ್ಲಾ ಇಸ್ರಾಯೇಲ್ಯರ ಅರಸನಾಗಿ ಕಿರೀಟಧರಿಸಿದನು.

**5. ಹಂತ V.-ಎಲ್ಲಾ ಇಸ್ರಾಯೇಲಿನ ಮೇಲೆ ಅರಸನು.**-ದಾವೀದನು ಎರಡನೆಯ ಸಲ ಬಹಿರಂಗವಾಗಿ ಹೆಬ್ರೋನಿನಲ್ಲಿ ಅಭಿಷೇಕಿಸಲ್ಪಟ್ಟನು. ಎಲ್ಲಾ ಕುಲಗಳ ಮೇಲಿನ ಮೂವತ್ಮೂರು ವರ್ಷಗಳ ಅವನ ಆಳ್ವಿಕೆಯು ಸ್ವಾಭಾವಿಕವಾಗಿ ಎರಡು ಭಾಗಗಳಲ್ಲಿ ಇಲ್ಲವೇ ಅವಧಿಗಳಲ್ಲಿ ಬೀಳುತ್ತದೆ.

*a. ಸಮೃದ್ಧಿ ಮತ್ತು ಬಲದ ವೃದ್ಧಿಯ ಅವಧಿ.*-ಇದು ದೇವರಿಗೆ ನಿಷ್ಠೆಯಿಂದ ಗುರುತಿಸಲ್ಪಟ್ಟ ಒಂದು ಅವಧಿಯಾಗಿದೆ. ದಾವೀದನ ಮೊದಲನೆಯ ಹೆಜ್ಜೆಯು ಹೆಚ್ಚು ಕೇಂದ್ರವಾಗಿರುವ ರಾಜಧಾನಿಯನ್ನು ಆಯ್ಕೆ ಮಾಡಿದ್ದು. ಯೆಬುಸ ಇಲ್ಲವೇ ಯೆರೂಸಲೇಮು ಪುರಾತನ ಕಾನಾನ್ಯರ ರಾಜಧಾನಿಯಾಗಿತ್ತು, ದೇಶವನ್ನು ವಶಪಡಿಸಿಕೊಂಡ ನಂತರ ಎರಡು ಸಲ - ಒಂದು ಸಲ ಯೆಹೋಶುವನ ದಿನಗಳಲ್ಲಿ, ಮತ್ತು ಒಂದು ಸಲ ನ್ಯಾಯಸ್ಥಾಪಕರ ದಿನಗಳಲ್ಲಿ - ಪಟ್ಟಣವು ವಶಪಡಿಸಿಕೊಳ್ಳಲ್ಪಟ್ಟಿತ್ತು; ಆದರೆ ಯೆಬೂಸಿಯರು ಕೋಟೆಯನ್ನು ಹಿಡಿದುಕೊಂಡಿರುವದನ್ನು ಮುಂದುವರಿಸಿದರು, ಹಾಗೂ ಹೀಗೆ ಪಟ್ಟಣವನ್ನು

ನಿಯಂತ್ರಿಸಿದರು. ದಾವೀದನು ಕೂಡಲೇ ಅದನ್ನು ವಶಪಡಿಸಿಕೊಂಡನು. ಅಲ್ಲಿದ್ದ ಮುಂಜೂಷವನ್ನು ಸ್ಥಳಾಂತರಿಸಿದನು, ಹೀಗೆ ಅವನು ಅದನ್ನು ರಾಜಕೀಯ ರಾಜ ಧಾನಿಯನ್ನಾಗಿ ಮಾಡಿದ್ದಲ್ಲದೇ. ಧಾಮಿರ್ಕವಾದದ್ದಾನ್ನಾಗಿಯೂ ಮಾಡಿದನು. ದಾವೀದನ ದಿನದಿಂದ ಅದು ಇಬ್ರಿಯರಿಗೆ ಎಲ್ಲಾ ಪಟ್ಟಣಗಳ ಪಟ್ಟಣವಾಗಿದೆ, ಆದರೆ ಕಾನಾನ್ಯರ ಗೋತ್ರದ ಈ ಭಾಗವನ್ನು ವಶಪಡಿಸಿದ್ದರೊಂದಿಗೆ ನಿಂತುಕೊಳ್ಳಲಿಲ್ಲ. ಸೌಲನು ಯುದ್ಧದಲ್ಲಿ ದೊಡ್ಡವನಾಗಿದ್ದನು, ದಾವೀದನು ಇನ್ನೂ ಹೆಚ್ಚು ದೊಡ್ಡವನಾಗಿದ್ದನು. ಅವನು ತನ್ನ ಜಯವನ್ನು ಎಲ್ಲಾ ದಿಕ್ಕುಗಳಲ್ಲಿ ಫಿಲಿಷ್ಟಿಯರ ಮತ್ತು ಎದೋಮ್ಯರ ಮತ್ತು ಮೋವಾಬ್ಯರ ಮತ್ತು ಅಮ್ಮೋನಿಯರ ಮತ್ತು ಸಿರಿಯನ್ನರ ಮೇಲೆ, ಐಗುಪ್ತದಿಂದ ಯೂಫ್ರೇಟೀಸದ ವರೆಗಿನ ಪ್ರತಿಯೊಂದು ಜನಾಂಗವನ್ನು ತನ್ನ ಅಧಿಕಾರದೊಳಗೆ ತೆಗೆದುಕೊಳ್ಳುವವರೆಗೆ ಮುಂದುವರಿಸಿದನು. ಫೊಯಿನೀಕ್ಯವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿತು, ಮತ್ತು ಅದರ ಅರಸ ಹೀರಾಮನೊಂದಿಗೆ ಸ್ನೇಹಪರ ಒಪ್ಪಂದವಾಯಿತು. ಹೀಗೆ ಅಬ್ರಹಾಮನಿಗೆ ಕೊಟ್ಟ ಒಡಂಬಡಿಕೆಯ ವಾಗ್ದಾನ ದಾವೀದನ ಸಾಮ್ರಾಜ್ಯದಲ್ಲಿ ಅತೀ ದೊಡ್ಡ ಭೌಗೋಲಿಕ ಮಟ್ಟದಲ್ಲಿ ನೆರವೇರಿತು.

*b. ಅವನತಿಯ ಅವಧಿ.*-ದಾವೀದನು ದೊಡ್ಡವನಾಗಿದ್ದರೂ ಶೋಧನೆಯನ್ನು ಹೊರತು ಪಡಿಸಿದವನಾಗಿರಲಿಲ್ಲ. ಒಬ್ಬ ಸೈನ್ಯಾಧಿಕಾರಿಯಾಗಿದ್ದ ಊರೀಯನ ಹೆಂಡತಿ ಬತ್ಷೆಬಳೊಂದಿಗೆ ಅಪರಾಧಿ ಸಂಬಂಧವುಳ್ಳವನಾಗಿ, ದಾವೀದನು ಅವನನ್ನು ಯುದ್ಧ ದಲ್ಲಿ ಮರಣಹೊಂದುವಂತೆ ನಡಿಸಿದನು ಮತ್ತು ಬತ್ಷೆಬಳನ್ನು ಮದುವೆಯಾದನು. ಪ್ರವಾದಿ ನಾತಾನನ್ನು ಅವನ ಅಪರಾಧದ ಬಗ್ಗೆ ಎದುರಿಸಿದನು ಮತ್ತು ಕುರಿಮರಿಯ ಸಾಮ್ಯದಿಂದ ಅದರ ಭಯಂಕರತೆಯನ್ನು ಅವನು ಅರಿತುಕೊಳ್ಳುವಂತೆ ಮಾಡಿದನು. ಐವತ್ತೊಂದನೆಯ ಕೀರ್ತನೆಯು ದಾವೀದನ ಮಾನಸಾಂತರದ ಪಕ್ವವಾದ ವ್ಯಕ್ತಪಡಿಸುವಿಕೆಯಾಗಿದೆ. ಆದರೆ ಯಾವುದೇ ಮಾನಸಾಂತರವು ಅವನ ಅಪರಾ ಧದ ಪರಿಣಾಮಗಳನ್ನು ಬದಲಾಯಿಸಲಾರದು, ಆ ದಿನದಿಂದ ದಾವೀದನ ಆಕಾಶವು ಮನೆತನದ ಅವಘಡಗಳಿಂದ ಮೋಡಕವಿದುಕೊಂಡಿತು, ಒಬ್ಬ ಮಗನು ತನ್ನ ಸಹೋ ದರಿಗಾದ ತಪ್ಪಿಗಾಗಿ ಇನ್ನೊಬ್ಬ ಸಹೋದರನನ್ನು ಕೊಲೆ ಮಾಡುತ್ತಾನೆ. ಅವನ ಪ್ರೀ ತಿಯ ಅಬ್ಷಾಲೋಮನು ಒಂದು ದಂಗೆಯಲ್ಲಿ ನಾಶವಾಗಿ ಹೋಗುತ್ತಾನೆ. ಅದಕ್ಕೆ ಅರಸನು ತನ್ನ ಸಿಂಹಾಸನವನ್ನು ಮತ್ತು ತನ್ನ ಜೀವವನ್ನು ಕೊಡಬೇಕಾಗ ಬಹುದಿತ್ತು. ಅವನ ನಂಬಿಗಸ್ತ ಸೇನಾಪತಿ, ಯೋವಾಬನು ಹಿರಿಯ ಮಗ, ಅದೋನಿಯನ ಒಳಸಂಚಿನಲ್ಲಿ ಸೇರಿಕೊಂಡಿದ್ದನು; ಮತ್ತು ಸೊಲೊಮೋನನ ವಾರಸುದಾರಿಕೆಯನ್ನು ಪಡೆದುಕೊಳ್ಳಲು, ದಾವೀದನು ಅವನನ್ನು ಅರಸನನ್ನಾಗಿ ಮಾಡಿದನು. ಅವನ ಸ್ವಂತ ಮರಣವು, ನಾಲ್ವತ್ತು ವರ್ಷಗಳ ಆಳ್ವಿಕೆಯ ನಂತರ ಬೇಗನೇ ಹಿಂಬಾಲಿಸಿತು.

**6. *ದಾವೀದನ ಆಳ್ವಿಕೆಯ ಗುಣಲಕ್ಷಣಗಳು.***-ಹೀಬ್ರೂ ಚರಿತ್ರೆಯಲ್ಲಿ ದಾವೀದನ ಆಳ್ವಿಕೆಯು ಅತಿದೊಡ್ಡ ಮಹಿಮೆಯುಳ್ಳದ್ದಾಗಿತ್ತು, ಸೊಲೊಮೋನನ ಆಳ್ವಿಕೆಯು ಬಾಹ್ಯ ವೈಭವದಲ್ಲಿ ಅದನ್ನು ದಾಟಿಹೋಯಿತು, ಆದರೆ ಬಲದಲ್ಲಿಯೂ ಸಮೃದ್ಧಿಯ ಅತ್ಯುತ್ತಮ ವಿಷಯಗ ಳಲ್ಲಿಯೂ ದಾವೀದನ ಆಳ್ವಿಕೆಯು ಅತ್ಯುನ್ನತ ಮಟ್ಟಕ್ಕೇರಿತು.

*a. ಅದು ಮಿಲಿಟರಿ ಆಳ್ವಿಕೆಯಾಗಿತ್ತು.*-ಪೂರ್ವ ಏಶಿಯದ ಚಿಕ್ಕ ದೇಶಗಳನ್ನು ಅವಷ್ಟಕ್ಕೆ ಬಿಟ್ಟು, ಐಗುಪ್ತ ಮತ್ತು ಅಸ್ಸೀರಿಯಗಳ ಈ ಅವಧಿಯಲ್ಲಿ ಅವನತಿಗಿಳಿದಿದ್ದವು. ಕೇವಲ ಸುರಕ್ಷಿತತೆಯು ಶ್ರೇಷ್ಠತೆಯಲ್ಲಿತ್ತು. ಸೌಲನ ಮೊದಲಿನ ವರ್ಷಗಳ ಆಕರ್ಷಿಕ ವಾದ ಯಶಸ್ಸುಗಳು ದಾವೀದನ ಜಯಶಾಲೀ ಯುದ್ಧಗಳಿಂದ ಮರೆಯಾದವು ಮತ್ತು ಐಗುಪ್ತದಿಂದ ಯೂಫ್ರೇಟೀಸದವರೆಗೆ, ದಾವೀದನ ಸಾಮ್ರಾಜ್ಯವು ಪ್ರಭಾವ ಬೀರಿದ

ದೊಡ್ಡಸ್ತಿಕೆಗೆ ಬೆಳೆಯಿತು.

*b. ಅದು ಆಂತರಿಕ ಸುಧಾರಣೆಯ ಯುಗವಾಗಿತ್ತು.*-ದಾವೀದನು ಜನರ ಹುಟ್ಟು ನಾಯಕನಾಗಿದ್ದನು, ಸ್ವಾಭಾವಿಕವಾದ ಸಂಘಟಿಸುವವನಾಗಿದ್ದನು. ರಾಜ್ಯದ ರಾಜಕೀಯ ಆಡಳಿತೆಯನ್ನೂ ಔದ್ಯೋಗಿಕ ಬಲಗಳನ್ನೂ ಸಂಘಟಿಸಿದನು; ಉಪಯುಕ್ತ ಮತ್ತು ಅಲಂಕಾರಿಕ ಕಲೆಗಳನ್ನು ಪರಿಚಯಿಸಿದನು; ಉಗ್ರಾಣಗಳನ್ನೂ ಕೋಟೆಗಳನ್ನೂ ಕಟ್ಟಿಸಿದನು; ಎಲ್ಲಕ್ಕಿಂತಲೂ ಹೆಚ್ಚಾಗಿ, ಯೆರೂಸಲೇಮನ್ನು ವಿಸ್ತರಿಸಿದನು ಮತ್ತು ಭದ್ರಪಡಿಸಿದನು; ಅಲ್ಲಿ ರಾಜ ಅರಮನೆಯನ್ನು ಕಟ್ಟಿದನು ಮತ್ತು "ದಾವೀದನ ಪಟ್ಟಣ" ವನ್ನು ದೇಶದ ಹೆಮ್ಮೆಯನ್ನಾಗಿ ಮಾಡಿದನು.

*c. ಅದು ಸಾಹಿತ್ಯದ ಆಳ್ವಿಕೆಯಾಗಿತ್ತು.*-ಬೈಬಲಿನಲ್ಲಿ ಅತ್ಯುತ್ತಮವಾದ ಪದ್ಯಗಳು ಕೀರ್ತನೆಗಳು, ಮತ್ತು ಕೀರ್ತನೆಗಳಲ್ಲಿ ಅತ್ಯುತ್ತಮವಾದವುಗಳು ದಾವೀದನ ಕೀರ್ತನೆಗಳು. ಆದರೆ ನಾವು ಮುಂದೆ ನೋಡುವಂತೆ ದಾವೀದನು ಮಾತ್ರವೇ ಕರ್ತೃವಾಗಿರಲಿಲ್ಲ, ಪದ್ಯವು ಮಾತ್ರವೇ ಸಾಹಿತ್ಯದ ರೂಪವಾಗಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ

*d. ಅದು ಧಾರ್ಮಿಕ ಆಡಳಿತೆಯಾಗಿತ್ತು.*-ಅವನ ಒಂದು ಕಪ್ಪು ಅಪರಾಧ ವಿದ್ದರೂ, ದಾವೀದನು ಹೃದಯದಲ್ಲಿ ಆಳವಾಗಿ ಧಾರ್ಮಿಕ ಮನುಷ್ಯನಾಗಿದ್ದನು. ಅವನ ಜೀವನದ ಚಾಲ್ತಿ ಸರಿಯಾಗಿತ್ತು. ದೇವರಲ್ಲಿ ನಂಬಿಕೆ, ದೇವರಿಗೆ ನಿಷ್ಠೆ, ದೇವರಿಗೆ ಕೃತಜ್ಞತೆ - ಈ ಗುಣಲಕ್ಷಣಗಳು ಪ್ರತಿಯೊಬ್ಬ ಇತರ ಅರಸನಿಂದ ಬಹಳವಾಗಿ ಭಿನ್ನವಾಗಿದ್ದವು. ಅವನು ಜನಾಂಗದ ಮೇಲೆ ಬಲವಾಗಿ ಇದರ ಪ್ರಭಾವ ಬೀರಿದನು. ಅವನು ಪರಿಶುದ್ಧ ಮಂಜೂಷವನ್ನು ಯೆರೂಸಲೇಮಿಗೆ ಕಿರ್ಯತ್ಯಾರೀಮಿ ನಿಂದ ವರ್ಗಾಯಿಸಿದನು. ಅದು ಫಿಲಿಷ್ಟಿಯರು ಅದನ್ನು ವಶಪಡಿಸಿಕೊಂಡು ಹಿಂದಿರುಗಿಸಿದ ನಂತರದಿಂದ ಅಲ್ಲಿಯೇ ಇತ್ತು. ಜನಾಂಗದ ಧಾರ್ಮಿಕ ಜೀವನವನ್ನು ಸಂಘಟಿಸಿದನು ಮತ್ತು ಚುರುಕುಗೊಳಿಸಿದನು. ಅದು ಎಂದೂ ತಲುಪಿದ ಮಟ್ಟಕ್ಕಿಂತ ಉನ್ನತ ಮಟ್ಟಕ್ಕೆ ತಂದನು. ದೇವಾಲಯ ಕಟ್ಟಡಕ್ಕಾಗಿ ಸಿದ್ಧತೆ ಮಾಡಿದನು, ಅದು ದೇವರಿಂದ ತಡೆ ಹಿಡಿಯಲ್ಪಟ್ಟದ್ದರಿಂದ ಮಾತ್ರವೇ ಕಟ್ಟಲ್ಪಡಲಿಲ್ಲ. ಒಬ್ಬನೇ ನಿಜವಾದ ದೇವರ ಆರಾಧನೆಗೆ ಆಸಕ್ತಿಯುಳ್ಳ ಧ್ಯಾನದಲ್ಲಿ, ಅನಂತರದ ಎಲ್ಲಾ ಅರಸರಿಗೆ ಮಾದರಿಯನ್ನು ಒದಗಿಸಿಕೊಟ್ಟನು. "ಅವನು ದಾವೀದನ ಮಾರ್ಗಗಳಲ್ಲಿ ನಡೆದನು"; "ಅವರು ದಾವೀದನ ಮಾರ್ಗಗಳಲ್ಲಿ ನಡೆಯಲಿಲ್ಲ"; ಇಂಥ ನಿರೂಪಣೆಯು ದಾವೀದನ ಉತ್ತರಾಧಿಕಾರಿಗಳನ್ನು ಇತಿಹಾಸಕಾರರು ಹೊಗಳುತ್ತಾರೆ ಇಲ್ಲವೇ ಖಂಡಿಸುತ್ತಾರೆ. ಸರ್ವ ಲೋಕದ ಮೇಲೆ ನೀತಿಯಿಂದ ಆಳುವ ಮೆಸ್ಸೀಯನ ಅತ್ಯುನ್ನತ ಮಾದರಿಯನ್ನು ಒದಗಿಸಿಕೊಟ್ಟನು.

## IV. ಸೊಲೊಮೋನನ ಆಳ್ವಿಕೆ ಮತ್ತು ಗುಣಲಕ್ಷಣ.

## (1 ಅರಸುಗಳು 2-11; 2 ಪೂರ್ವಕಾಲವೃತ್ತಾಂತ 1-9.)

**1. ಸೊಲೊಮೋನನು ಅರಸನಾದದ್ದು ಮತ್ತು ಅವನ ಪ್ರಭುತ್ವಗಳು.**-ಸೊಲೊಮೋನನು "ಶ್ರೀಮಂತಿಕೆಯಲ್ಲಿ ಜನಿಸಿದ" ಮೊದಲನೆಯ ಹಿಬ್ರೂ ಅರಸನು. ವಾರಸುದಾರ ತನದ ಪ್ರಶ್ನೆಯು ಎಲ್ಲಾ ಚರಿತ್ರೆಯಲ್ಲಿ ತೊಂದರೆದಾಯಕವಾದದ್ದಾಗಿದೆ. ದಾವೀದನಿಗೆ ಅವನ ಬೇರೆ ಬೇರೆ ಹೆಂಡತಿಯರಿಂದ ಹಲವಾರು ಗಂಡುಮಕ್ಕಳಿದ್ದರು. ನಾವು ಆಗಲೇ ನೋಡಿದಂತೆ, ಅಮ್ನೋನ ಮತ್ತು ಆಬ್ಷಾಲೇಮರು ಉಗ್ರವಾದ ಮರಣದಿಂದ ಸುತ್ತು ಹೋಗಿದ್ದರು. ಇತರ ಹಿರಿಯ ಮಕ್ಕಳನ್ನು ಬಿಟ್ಟು ಸೊಲೊಮೋನನ್ನು ತನ್ನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿಕೊಂಡನು. ಅವನ ಆಯ್ಕೆಯು ಬತ್ಷೆಬಳಿಗೆ, ಸೊಲೊಮೋ

ನನ ತಾಯಿಗೆ ಪಕ್ಷಪಾತ ಮಾಡುವುದರಿಂದ ಆಗಿತ್ತು, ಆದರೆ ಅದು ಹೆಚ್ಚಾಗಿ ಸೊಲೊಮೋನನ ಶ್ರೇಷ್ಠ ಅರ್ಹತೆಗಳಿಗಾಗಿ, ಇದ್ದಿರಬಹುದು. ಆದೋನಿಯನ ದಂಗೆಯ ಸಮಯದಲ್ಲಿ ಸೊಲೊಮೋನನಿಗೆ ಕಿರೀಟಧಾರಣೆಯನ್ನು ದಾವೀದನು ಮಾಡಿಸಿದ್ದು, ದಾವೀದನ ಮರಣದ ಸಮಯದಲ್ಲಿ ಸೊಲೊಮೋನನು ಸಮಾಧಾನದಿಂದ ಸಿಂಹಾಸ ನಾರೂಢನಾಗುವಲ್ಲಿ ಯಶಸ್ವಿಯಾದನು. ಆದರೆ ಅದೋನಿಯನಿಗೆ ಪರವಾಗಿ ಇನ್ನೊಂದು ಒಳಸಂಚಿನ ಸೂಚನೆಗಳು ಕಂಡುಬಂದಾಗ, ಸೊಲೊಮೋನನು ತಕ್ಷಣವೇ ಯೋವಾಬ ಮತ್ತು ಅದೋನಿಯನು ಕೊಲ್ಲಲ್ಪಡಲು ಆಜ್ಞಾಪಿಸಿದನು. ಹೀಗೆ ಅವನು ತನ್ನ ತಂದೆಯ ವಿಶಾಲವಾದ ರಾಜ್ಯದ ಮೇಲೆ ಪ್ರಶ್ನಾತೀತ ಅರಸನಾಗಿ ಉಳಿದುಕೊಂಡನು. ನಾಲ್ವತ್ತು ವರ್ಷಗಳ ಆಳ್ವಿಕೆಯಲ್ಲಿ, ರಾಜ್ಯದೊಳಗೆ ಗಂಭೀರವಾದ ತೊಂದರೆಗಳು ಇಲ್ಲವೇ ಹೊರಗಿನಿಂದ ಆಂತರಿಕ ಸುಧಾರಣೆಗಳಿಗಾಗಿ ಯಾವ ಆತಂಕಗಳೂ ಬರಲಿಲ್ಲ.

**2 ಸೊಲೊಮೋನನ ಬುದ್ಧಿವಂತಿಕೆಯ ಆಯ್ಕೆ.**-ಸೊಲೊಮೋನನು ಅರಸನಾದ ಕೂಡಲೇ ಗಿಬ್ಯೋನಿನಲ್ಲಿ ಉತ್ಕೃಷ್ಟವಾದ ಧಾರ್ಮಿಕ ಹಬ್ಬವನ್ನು ಆಚರಿಸಿದನು. ಗಿಬ್ಯೋನ ಯೆರೂಸಲೇಮಿನಿಂದ ಏಳು ಮೈಲು ಉತ್ತರಕ್ಕಿದೆ, ಅಲ್ಲಿ ಆಗ ಹಳೇ ದೇವದರ್ಶನ ಗುಡಾರವು ಇತ್ತು. ಪ್ರತ್ಯೇಕವಾಗಿ ಸಾಮ್ರಾಜ್ಯದ ಭಾರವು ಅವನ ಯುವ ಹೃದಯದ ಮೇಲೆ ಇತ್ತು, ಯಾಕಂದರೆ, ಆ ರಾತ್ರಿ ಒಂದು ಕನಸಿನಲ್ಲಿ ದೇವರು ಅವನಿಗೆ ಕಾಣಿಸಿಕೊಂಡು ಅವನು ಕೇಳಿದ್ದೆಲ್ಲವನ್ನೂ ಕೊಡುವೆನು ಎಂದು ಹೇಳಿದನು; ಒಂದು ಗಂಡಾಂತರ ಕರವಾದ ಸ್ವಾತಂತ್ರ್ಯ ಎಂದು ನಾವು ಭಾವಿಸುತ್ತೇವೆ. ಸಾಮಾನ್ಯ ಮನಸ್ಸುಗಳ ಕೆಳಗಿನ ಸಂಗತಿಗಳನ್ನು ದಾಟಿಹೋಗಿ, ಸೊಲೊಮೋನನು ತನ್ನ ಜನಾಂಗವನ್ನು ಆಳಿನಡಿಸಲು ಜ್ಞಾನವನ್ನು ಕೇಳಿಕೊಂಡನು. "ಜ್ಞಾನಕ್ಕಾಗಿ ಕೇಳುವುದರಿಂದ ಅವನು ತನ್ನ ಜ್ಞಾನವನ್ನು ತೋರಿಸಿದನು"; ಮತ್ತು ಎಲ್ಲಾ ಸಮಕಾಲೀನವರಿಗಿಂತ ಹೆಚ್ಚಾದ ಜ್ಞಾನವು ಅವನಿಗೆ ಕೊಡಲ್ಪಟ್ಟಿತು. ಅವನ ಜ್ಞಾನದ ಉದಾಹರಣೆಗಳು ವ್ಯಾವಹಾರಿಕ ತೀರ್ಪುಗಳಲ್ಲಿ ಕೊಡಲ್ಪಟ್ಟಿವೆ (1 ಅರಸುಗಳು 3:16-28), ಮತ್ತು ವೈಜ್ಞಾನಿಕ ಜ್ಞಾನದಲ್ಲಿ ಹಾಗೂ ಸಾಹಿತ್ಯದ ಕಲೆಯಲ್ಲಿ ಕೊಡಲ್ಪಟ್ಟಿವೆ (1 ಅರಸುಗಳು 4:29-34). ಅವನ ಮೂವತ್ತು ಸಾವಿರ ಜ್ಞಾನೋಕ್ತಿಗಳಲ್ಲಿ, ಒಂದು ಸಾವಿರಕ್ಕಿಂತ ಕಡಿಮೆ ಜ್ಞಾನೋಕ್ತಿಗಳು ನಮಗೆ ಬಂದಿವೆ; ಮತ್ತು ಅವನಿಗೆ ಸಂಬಂಧಿಸಿದ ಕೀರ್ತನೆ 72 ಮತ್ತು 128ನ್ನು ಕೂಡಿಸದಿದ್ದರೆ, ಅವನ "ಹಾಡು"ಗಳಲ್ಲಿ ಒಂದುಸಾವಿರ ಐದರಲ್ಲಿ ಕೇವಲ ಒಂದರಂತೆ ಮಾತ್ರ ಕಾಪಾಡಿ ಇಡಲ್ಪಟ್ಟಿವೆ. ಅವನ ಅನೇಕ ಆಡಳಿತಾತ್ಮಿಕ ಕರ್ತವ್ಯಗಳ ಮತ್ತು ದೊಡ್ಡ ಕಟ್ಟಡದ ಸಾಹಸ ಕಾರ್ಯದ ಮಧ್ಯದಲ್ಲಿ ಅಂಥ ಸಾಹಿತ್ಯದ ಚಟುವಟಿಕೆಯು ಉನ್ನತ ಮಟ್ಟದ ಬೌದ್ಧಿಕ ಆಶಕ್ತಿಯನ್ನು ತೋರಿಸುತ್ತದೆ; "ಭೂಪಾಲಕರಲ್ಲಿಯೂ ಅನೇ ಕರು ಅವನ ಜ್ಞಾನ ವಾಕ್ಯಗಳನ್ನು ಕೇಳುವುದಕ್ಕೋಸ್ಕರ ಬಂದರು"[4] ಮತ್ತು "ಇದರಲ್ಲಿ ಅರ್ಧವನ್ನಾದರೂ ಹೇಳಲಿಲ್ಲ"[5] ಎಂಬ ಶೇಬಾದ ರಾಣಿಯ ಹೇಳಿಕೆಯ ದಾಖಲೆಯು ಆಗಲೇ ಅರ್ಥಮಾಡಿಕೊಳ್ಳಲ್ಪಟ್ಟಿದೆ.

**3. ಸೊಲೊಮೋನನ ದೇವಾಲಯ.**-ಯುವಕ ಅರಸನ ಮೊದಲನೆಯ ಚಿಂತನೆಯು ದೇವಾಲಯವನ್ನು ಕಟ್ಟುವುದಾಗಿತ್ತು. ದಾವೀದನು ಆಗಲೇ ಯೋಜನೆಯನ್ನು ಸ್ವೀಕರಿಸಿದ್ದನು ಮತ್ತು ಬಹಳಷ್ಟು ಸಿದ್ಧತೆಗಳನ್ನು ಮಾಡಿದ್ದನು. ತೂರಿನ ಹಿರಾಮ ನೊಂದಿಗೆ ಒಪ್ಪಂದ ಮಾಡಿಕೊಂಡು ಲೆಬನೋನ ಪರ್ವತದಿಂದ ದೇವದಾರು ಕಟ್ಟಿಗೆಯನ್ನು ಮತ್ತು ನಿಪುಣ ಕೆಲಸದವರನ್ನು ಪಡೆದು ಕೊಂಡನು. ಅದನ್ನು ಕಟ್ಟುವಲ್ಲಿ ಏಳು ವರ್ಷಗಳು ಕಳೆಯಲ್ಪಟ್ಟವು. ಮುಖ್ಯ ಕಟ್ಟಡವು ಕೇವಲ ಮೂವತ್ತು X ತೊಂಭತ್ತು ಅಡಿಯಿತ್ತು (ದೇವದರ್ಶ ಗುಡಾರಕ್ಕಿಂತ ಎರಡು ಪಟ್ಟು ದೊಡ್ಡದು), ಅನ್ಯರ

ದೇವಾಲಯ ಗಳಿಗಿಂತ ಮತ್ತು ಜಗತ್ತಿನ ಕ್ರೈಸ್ತ ಕಥೀಡ್ರೆಲ್‌ಗಳಿಗಿಂತ ಚಿಕ್ಕದಾಗಿತ್ತು; ಆದರೆ ಐಶ್ವರ್ಯಕ್ಕೆ ಸಮಾನವಾದದ್ದು ಇರಲಿಲ್ಲ. ಸುಮಾರು ಆರುನೂರು ಮಿಲಿಯ ಡಾಲರುಗಳ ಬೆಲೆಬಾಳುವ ಬಂಗಾರದ ಹೊದಿಕೆಯನ್ನೊಳಗೊಂಡಿತ್ತು. ಆದರೆ ಅದರ ಅತೀ ಶ್ರೇಷ್ಠ ಭಿನ್ನತೆಯು ಇರುವಂಥದ್ದಾಗಿತ್ತು. ಅತಿಶಯವಾದ ವಿಷಯಲಂಪಟತೆಯ ವಿಗ್ರಹಾರಾಧನೆಯ ಯುಗದಲ್ಲಿ ಶ್ರೇಷ್ಠವಾದ ಆತ್ಮಿಕತೆಗಾಗಿ ನಿಂತುಕೊಂಡಿತ್ತು. "ಆಕಾಶವೂ ಉನ್ನತೋನ್ನತವಾದ ಆಕಾಶವೂ ನನ್ನ ವಾಸಕ್ಕೆ ಸಾಲವು; ಹೀಗಿರುವಲ್ಲಿ ನಾನು ಕಟ್ಟಿಸಿದ ಈ ಮಂದಿರವು ಹೇಗೆ ಸಾಕಾದೀತು."[6] "ನಿನ್ನ ನಿವಾಸವಾಗಿರುವ ಪರಲೋಕದಿಂದ ಲಾಲಿಸು."[7] ಇಂಥ ಉನ್ನತವಾದ ತತ್ವಗಳು ಪ್ರತಿಷ್ಠೆಯ ಪ್ರಾರ್ಥನೆಯಲ್ಲಿ ಸೊಲೊಮೋನನಿಂದ ವ್ಯಕ್ತಪಡಿಸಲ್ಪಟ್ಟಿವೆ. ದೇವಾಲಯವನ್ನು ಪೂರ್ತಿಗೊಳಿಸಿದ್ದು ದೇಶದ ರಾಜಧಾನಿಯ ದಾವೀದನ ಆದರ್ಶದ ಸಾಧನೆಯಾಗಿದೆ. ಜನಾಂಗದ ಜೀವನಧ್ಯೇಯವು ಮಿಲಿಟರಿಯಾಗಿರಲಿಲ್ಲ, ಆದರೆ ಆತ್ಮಿಕ ಆಳ್ವಿಕೆಯಾಗಿತ್ತು; ಪ್ರಾಪಂಚಿಕ ವಾದದ್ದಲ್ಲ ಆದರೆ ನೈತಿಕ ಭವ್ಯತೆಯಾಗಿತ್ತು. ಭೌತಿಕ ಒತ್ತಡಗಳ ನ್ಯಾಯ ಸಮ್ಮತವಾದ ಮಿತಿಯು, ಆತ್ಮಿಕ ವಿಷಯಗಳಿಗೆ ಸೇವೆಮಾಡುವುದನ್ನು ನಿಲ್ಲಿಸುವ ಹಂತಕ್ಕೆ ಇರುತ್ತದೆ ಮತ್ತು ಜನಾಂಗಿಕ ಧ್ಯೇಯದ ಅರುಹಿನಲ್ಲಿ ಸಹಾಯಕ್ಕೆ ನಿಲ್ಲುತ್ತದೆ. ಮೊದಲನೆಯ ಆಲಯವು, ಅದು ನೆಬುಕದ್ನೆಚ್ಚರನಿಂದ ನಾಶಪಡಿಸುವವರೆಗೆ, ನಾಲ್ಕು ನೂರಕ್ಕಿಂತ ಹೆಚ್ಚು ವರ್ಷ ಉಳಿದುಕೊಂಡಿತ್ತು.

**4. ಸೊಲೊಮೋನನ ಇತರ ಕಟ್ಟಡಗಳು.**-ಸೊಲೊಮೋನನ ಆಳ್ವಿಕೆಯು ಹಿಬ್ರೂ ವಾಸ್ತು ಶಿಲ್ಪದಲ್ಲಿ ಓಗುಸ್ತನ ಯುಗವಾಗಿತ್ತು. "ಬೆಳ್ಳಿಯು ಕಲ್ಲಿನ ದೇವದಾರು ಮರಗಳು ಅತ್ತೀಮರಗಳ ಹಾಗೂ ಅವನು ಮಾಡಿದನು."[8] ತನಗೊಂದು ಭವ್ಯವಾದ ಅರಮನೆಯನ್ನೂ ಮತ್ತು ಫರೋಹನ ಮಗಳಿಗಾಗಿ ಒಂದು ಅರಮನೆಯನ್ನೂ ಕಟ್ಟಿಸಿದನು. ಆಕೆಯನ್ನು ತನ್ನ ನಿಜವಾದ ರಾಣಿಯಂತೆ ತಿಳಿದಿರಬಹುದಾಗಿದೆ, ಹಲವಾರು ಕೋಟೆಗಳನ್ನು, ತನ್ನ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಪಟ್ಟಣಗಳನ್ನೂ ಕಟ್ಟಿಸಿದನು. ತಾದ್ಮೊರ, ರೋಮನ್ ದಿನಗಳ ಪಾಲ್ಮಿರಾ, ಅತೀ ಹೆಚ್ಚು ಪ್ರಸಿದ್ಧವಾಗಿತ್ತು.

**5. ಸೊಲೊಮೋನನ ವ್ಯವಹಾರ.**-ಇಬ್ರಿಯರು ಮೂಲದಲ್ಲಿ ಕುರಿಕಾಯುವ ಜನರಾಗಿದ್ದರು, ತಮ್ಮ ಕುರಿಮಂದೆಗಳನ್ನೂ ದನಗಳ ಹಿಂಡುಗಳನ್ನೂ ಜೋಪಾಸನೆ ಮಾಡುತ್ತಿದ್ದರು. ಐಗುಪ್ತದಲ್ಲಿ ಮತ್ತು ಜಯದ ನಂತರ, ಅವರು ಹಣ್ಣುಗಳನ್ನು ಧಾನ್ಯಗಳನ್ನು ಬೆಳೆಯುವ ಒಕ್ಕಲುತನದ ಜನರಾದರು ಹಾಗೆಯೇ ಸಂಗ್ರಹಕಾರರೂ ಆಗಿದ್ದರು. ಈಗ, ಮೊದಲನೆಯ ಸಲಕ್ಕೆ ವ್ಯಾಪಾರೀ ಜನರಾದರು. ತೂರಿನ ಒಪ್ಪಂದದ ಮೂಲಕವಾಗಿ ಸ್ಫೇನಿನಲ್ಲಿಯ ತಾರ್ಷಿಸಿನ ವರೆಗೆ ಮೆಡಿಟರೇನಿಯನ್‌ದ ವ್ಯಾಪಾರ ಕೈಕೊಂಡರು; ಕೆಂಪು ಸಮುದ್ರದ ಬಂದರುಗಳ ಮುಖಾಂತರ ಇಂಡಿಯಾದೊಂದಿಗೂ ಬಹಳವಾದ ವ್ಯಾಪಾರವಿತ್ತು. ತಮಗೆ ಸಮೀಪದ ನೆರೆಯವರಾಗಿದ್ದ ಫೊಯಿನಿಕ್ಯ ರೊಂದಿಗೆ, ಐಗುಪ್ತರೊಂದಿಗೆ ಮತ್ತು ಅರೆಬಿಯನ್ನರೊಂದಿಗೆ ತಮ್ಮ ಉತ್ಪನ್ನಗಳನ್ನು ಬದಲಾಯಿಸಿಕೊಳ್ಳುತ್ತಿದ್ದರು.

**6. ಸೊಲೊಮೋನನ ಧರ್ಮಭ್ರಷ್ಟತೆ.**-ಸೊಲೊಮೋನನದರಂತೆ ಯಾವ ಜೀವನ ಚರಿತ್ರೆಗಳೂ ಅಷ್ಟು ನಿರಾಶಾದಾಯಕವಾದವುಗಳಾಗಿರುವುದಿಲ್ಲ. ಅವನು ಎಂದೂ ಅರಸುಗಳ ಸಾಮಾನ್ಯ ಗುಂಪಿನ ಕೀಳು ಮಟ್ಟಕ್ಕೆ ಇಳಿಯಲಿಲ್ಲ; ಆದರೆ ಅವನ ಅನಂತರದ ವರ್ಷಗಳ ನೆರವೇರುವಿಕೆಯು ಅವನ ಯೌವನ ಪ್ರಾಯದ ಅಮೂಲ್ಯವಾದ ವಾಗ್ದಾನಕ್ಕಿಂತ ನೋವಿನಿಂದ ಕೆಳಮಟ್ಟಕ್ಕೆ ಬೀಳುತ್ತವೆ.

*a. ಅರಸನ ನಿಯಮದ ಮೀರುವಿಕೆ.*-ಮೋಶೆಯು (ಧರ್ಮೋಪದೇಶಕಾಂಡ 17:14-20) ಅರಸನ ನಿಯಮವನ್ನು ನೇಮಿಸಿದ್ದನು. ಮೂರು ವಿಧಿಗಳಲ್ಲಿ

ಸೊಲೊಮೋನನು ಅದನ್ನು ಮೀರಿದನು: (1) ಕುದುರೆಗಳ ಸಂಖ್ಯೆ ಹೆಚ್ಚಿಸುವುದರಿಂದ (1 ಅರಸುಗಳು 10:26), ಮಿಲಿಟರಿಯ ಗುರುತು ಮತ್ತು ಸಂಕೇತ; (2) ಅವನ ಅಂತಪುರವು ಒಂದು ಸಾವಿರ ಹೆಂಡತಿಯರನ್ನು ಒಳಗೊಳ್ಳುವವರೆಗೆ ಬೆಳೆಸಿದ್ದು; (3) ಬೆಳ್ಳಿ ಮತ್ತು ಬಂಗಾರವನ್ನು ಬಹಳವಾಗಿ ಹೆಚ್ಚಿಸಿಕೊಂಡದ್ದರಿಂದ, ತನ್ನ ಜನರನ್ನು ಬಡವರನ್ನಾಗಿ ಮಾಡಿದ್ದರಿಂದ ಮಾತ್ರವೇ ಇದು ಸಾಧ್ಯವಾಯಿತು. ಇವುಗಳನ್ನು ಅವನು ಕೂಡಿಸಿಕೊಂಡನು

*b. ದೇವಾಧೀಪತ್ಯದ ಮೂಲ ನಿಯಮದ ಗಂಭೀರವಾದ ಮೀರುವಿಕೆಗಳು.*- "ನಮ್ಮ ಮುಂದೆ ನಿನಗೆ ಬೇರೆ ದೇವರುಗಳು ಇರಬಾರದು"[9]; ಮೋದಲನೆಯ ಆಜ್ಞೆಯು ಇಂಥದ್ದಾಗಿತ್ತು. ಇಸ್ರಾಯೇಲು ಇದರ ಪರಿಶುದ್ಧ ಆಚರಣೆಯನ್ನು ಒಪ್ಪಿಕೊಂಡಿತ್ತು. ವಿಶ್ವದ ಬಹು ದೇವತಾ ತತ್ವಕ್ಕೆ ಬದಲಾಗಿ ಶುದ್ಧ ಆತ್ಮಿಕ ಆರಾಧನೆಯನ್ನು ಇಡುವುದು ಜನಾಂಗದ ಸೇವೆಯಾಗಿತ್ತು; ಅದಕ್ಕೆ ಬೇರೆ ಇತರ ಸಾಕಾದಷ್ಟು ಕಾರಣವು ಜನಾಂಗಿಕ ಅನುಭವಕ್ಕಾಗಿ ಇರಲಿಲ್ಲ. "ಅವನು (ಸೊಲೊಮೋನನು) ವೃದ್ಧನಾದಾಗ ಇವರು (ಅವನ ಹೆಂಡದಿಯರು) ಅವನ ಹೃದಯವನ್ನು ಅನ್ಯದೇವತೆಗಳ ಕಡೆಗೆ ತಿರುಗಿಸಿದರು."[10]

*c. ಜನಾಂಗಿಕ ಬಲಹೀನತೆಯ ಮತ್ತು ಅವನತಿಯ ಅಂಶಗಳು.*-ಅರಸನ ನಿಯಮದ ಮತ್ತು ರಾಜ್ಯದ ನಿಯಮದ ಉಲ್ಲಂಘನೆಗಳು ಬಲಹೀನತೆಯ ಅಂಶಗಳಾಗಿ ರುಜುವಾತು ಪಡಿಸಲ್ಪಟ್ಟವು. ಮತ್ತು ಅವನ ಮನೆಯ ಮೇಲೆ ದೇವರ ನ್ಯಾಯತೀರ್ಪನ್ನು ತಂದವು. ಬರಲಿಕ್ಕಿದ್ದ ವಿಭಜನೆಯ ದಂಡನೆಯು ಅವನಿಗೆ ಪ್ರಕಟಿಸಲ್ಪಟ್ಟಿತು. ಅವನ ಅನಂತರದ ಜೀವಿತವು, ಮನೆಯಲ್ಲಿಯ ಅತೃಪ್ತಿಯ ಹಾಗೂ ಕಪ್ಪಕೊಡುತ್ತಿದ್ದ ಹೊರದೇಶಗಳಲ್ಲಿಯ ಅಶಾಂತಿಯ ಗುರುತುಗಳನ್ನು ತೋರಿಸಿತು. ಹಾಗಿದ್ದರೂ ಗಂಭೀರವಾದ ದಂಗೆಯು ಸಂಭವಿಸಲಿಲ್ಲ, ಹಾಗೂ ಸೊಲೊಮೋನನ ದೀರ್ಘವಾದ ಆಳ್ವಿಕೆಯು ಸಮಾಧಾನದಲ್ಲಿ ಮುಕ್ತಾಯಗೊಂಡಿತು.

## V. ಪ್ರವಾದಿಗಳ ಉದಯ.

ತನ್ನ ಸ್ವಂತ ಯುಗದಲ್ಲಿ, ಮತ್ತು ಅನಂತರ ಶತಮಾನಗಳ ವರೆಗೆ ಮೋಶೆಯು ಒಬ್ಬನೇ ಪ್ರಭಾವದೊಂದಿಗೆ ನಿಲ್ಲುತ್ತಾನೆ, ಯೆಹೋಶುವ ಮತ್ತು ಸಮುವೇಲರ ಮಧ್ಯದಲ್ಲಿ ಒಬ್ಬ ಪ್ರವಾದಿಯ ಹೆಸರಾದರೂ ಹೇಳಲ್ಪಟ್ಟಿರುವುದಿಲ್ಲ. ಆದರೆ ಸಮುವೇಲನಿಂದ ಹಾಗೂ ಅರಸುತನದಿಂದ ದೊಡ್ಡ ಪ್ರವಾದಿಗಳ ಯುಗವು ಪ್ರಾರಂಭವಾಗುತ್ತದೆ. ಪ್ರವಾದಿಯು ಅರಸನ ಅವಶ್ಯಕವಾದ ಪ್ರತಿಭಾಗವಾಗಿದ್ದನು; ಮತ್ತು ಸಮುವೇಲನ ಹಾಗೂ ಸೌಲನ ದಿನಗಳಿಂದ ಅವನ ಚಿತ್ರದಂಥ ಆಕಾರವು ಮತ್ತು ಪ್ರಭಾವವುಳ್ಳ ಸಂದೇಶವು ಹಳೇ ಒಡಂಬಡಿಕೆಯ ಚರಿತ್ರೆಯ ಗ್ರಂಥವು ಮುಕ್ತಾಯವಾಗುವವರೆಗೆ ಕೊರತೆಯಲ್ಲಿರುವುದಿಲ್ಲ. ಸಮುವೇಲನು ಒಟ್ಟಿನಲ್ಲಿ ಸೌಲನಿಗಿಂತ ಹೆಚ್ಚು ಮಹತ್ವದ ವ್ಯಕ್ತಿಯಾಗಿದ್ದಾನೆ. ಪ್ರವಾದಿಗಳಲ್ಲಿ ಅತಿದೊಡ್ಡವರಲ್ಲಿ ಒಬ್ಬನಾದ ದಾವೀದನು ತಾನು ಸತತವಾಗಿ ಪ್ರವಾದಿಗಳಿಂದ ಎಚ್ಚರಿಸಲ್ಪಟ್ಟನು ಮತ್ತು ಗದರಿಸಲ್ಪಟ್ಟನು ಮತ್ತು ಸಲಹೆಕೊಡಲ್ಪಟ್ಟನು. ಸೊಲೊಮೋನನ ಆಳ್ವಿಕೆಯಲ್ಲಿ ಪ್ರವಾದಗಳು ಮಹತ್ವವಿಲ್ಲದ ಪಾತ್ರವಾಗಿದ್ದರು. ಒಬ್ಬನು ಅಂತ್ಯದಲ್ಲಿ ಕಾಣಿಸಿಕೊಂಡನು, ಅವಧಿಯಲ್ಲಿ ಇದ್ದ ಪ್ರವಾದಿಗಳು - ಸಮುವೇಲ, ಗಾದ (1 ಸಮುವೇಲ 22:5; 2 ಸಮುವೇಲ 24:11), ನಾತಾನ (2 ಸಮುವೇಲ 7:2-17; 12:1-12; 1 ಅರಸುಗಳು 1:8-24), ಇದ್ದೋವ (2 ಪೂರ್ವಕಾಲವೃತ್ತಾಂತ 9:29; 12:15; 13:22), ಮತ್ತು ಅಹೀಮ (1 ಅರಸುಗಳು 11:29-39; 2 ಪೂರ್ವಕಾಲವೃತ್ತಾಂತ 9:29). ಚರಿತ್ರೆಯಲ್ಲಿ

ಒಳಗೊಂಡಿರುವ ನಾತಾನನ ಸಾಮ್ಯದಂಥ ತುಣುಕುಗಳನ್ನು ಅಲ್ಲಲ್ಲಿ ಇರುವುದನ್ನು ಬಿಟ್ಟರೆ, ಅವರ ಯಾವುದೇ ಬೋಧನೆಗಳು ನಮಗೆ ಬಂದಿರುವದಿಲ್ಲ.

## VI. ಆ ಕಾಲದ ಸಾಹಿತ್ಯ.

ಅತೀ ಪುರಾತನ ಹೀಬ್ರು ಸಾಹಿತ್ಯದ ದಿನಾಂಕವನ್ನು ಕೊಡುವುದು ಅಸಾಧ್ಯವಾಗಿರುತ್ತದೆ. ಪಂಚಗ್ರಂಥವು ಭಾಗಶಃವಾಗಿ ಮೋಶೆಗಿಂತ ಮೊದಲಿನ ದಾಖಲೆಗಳ ಮೇಲೆ ಅವಲಂಭಿಸಿರುವ ಸಾಧ್ಯತೆಯಿದೆ. ಲೆಮೆಕನ "ಖಡ್ಗಗದ ಹಾಡು" (ಆದಿಕಾಂಡ 4:23, 24). ಮತ್ತು ಅರಣ್ಯಕಾಂಡ 21:12-17, 27-30ರಲ್ಲಿಯ ಪದ್ಯದ ತುಣುಕುಗಳು, ಬಹಳ ಪುರಾತನ ಕಾಲದ ಪದ್ಯ ಸಂಗ್ರಹಗಳ ಕಡೆಗೆ ತೋರಿಸುತ್ತವೆ. ಯೆಹೋಶುವನ ಪುಸ್ತಕವು ಬಹುಶಃ ಸಮುವೇಲನ ಸಮಯದಲ್ಲಿ ರಚಿಸಲ್ಪಟ್ಟದ್ದು, ಈಗ ಕಳೆದು ಹೋಗಿರುವ "ಯಾಷಾರ ಗ್ರಂಥ"ದಿಂದ ಉಲ್ಲೇಖಿಸುತ್ತದೆ. ದಾವೀದನ ದಿನಗಳಿಂದ ವಿಪುಲವಾಗಿ ಐತಿಹಾಸಿಕ ಸಾಹಿತ್ಯವು ಬೆಳೆದು ಬಂದಿತು; ಐಗುಪ್ತದ ಇಲ್ಲವೇ ಕಲ್ದೀಯರ, ಅಥವಾ ಅಸ್ಸೀರಿಯದ ಪುರಾತನ ಸಮ್ರಾಜ್ಯಗಳು ನಮಗೆ ಕೊಟ್ಟಿದ್ದಕ್ಕಿಂತ ಹೆಚ್ಚಾದವುಗಳನ್ನು ಕೊಟ್ಟಿದೆ. ನ್ಯಾಯಸ್ಥಾಪಕರ ಮತ್ತು ರೂತಳ ಪುಸ್ತಕಗಳು ಅವನ ಆಳ್ವಿಕೆಯ ಸಮಯದಿಂದ ಬಂದಿರಬಹುದು. ಅವಧಿಯ ಇತರ ಐತಿಹಾಸಿಕ ಕೃತ್ಯಗಳು, "ಸಮುವೇಲನ ಚರಿತ್ರೆ," "ನಾತಾನನ ಚರಿತ್ರೆ," "ಗಾದನ ಚರಿತ್ರೆ" (1 ಪೂರ್ವಕಾಲವೃತ್ತಾಂತ 29:29). ಮತ್ತು "ಸೊಲೊಮೋನನ ಕೃತ್ಯಗಳ ಪುಸ್ತಕ" (1 ಅರಸುಗಳು 11:41), ಇವು ಈಗ ಕಳೆದು ಹೋಗಿವೆ. ಆದರೆ ಅವು ನಮ್ಮ ಈಗಿನ ಸಮುವೇಲ ಮತ್ತು ಅರಸುಗಳ ಪುಸ್ತಕಗಳಿಗೆ ತಳಹದಿಯಾಗಿರುವುದರಲ್ಲಿ ಸಂಶಯವಿಲ್ಲ. ಆದರೆ ದಾವೀದನ ಮತ್ತು ಸೊಲೊಮೋನನ ಯುಗವು ಅದರ ಪದ್ಯದ ಮತ್ತು "ಜ್ಞಾನ" ಸಾಹಿತ್ಯದ ಉತ್ಕೃಷ್ಟವಾದ ಬೆಳವಣಿಗೆಯಿಂದ ವಿಶೇಷವಾಗಿ ಪ್ರತ್ಯೇಕಿಸಲ್ಪಟ್ಟಿದೆ. ಎಪ್ಪತ್ಮೂರು ಕೀರ್ತನೆಗಳು ದಾವೀದನಿಗೆ ಸಂಬಂಧಿಸಲ್ಪಟ್ಟಿವೆ ಮತ್ತು ಎರಡು ಕೀರ್ತನೆಗಳು (72 ಮತ್ತು 128) ಸೊಲೊಮೋನನಿಗೆ ಸಂಬಂಧಿಸಲ್ಪಟ್ಟಿವೆ, ಸೊಲೊಮೋನನ ಸಾಹಿತ್ಯವು ದಾವೀದನ ಬರಹಗಳ ಆತ್ಮಿಕ ಆಸಕ್ತಿಯನ್ನು ಕಳೆದುಕೊಳ್ಳುತ್ತದೆ, ಆದರೆ ಧ್ಯಾನದ ಬಲದಲ್ಲಿ ಹಾಗೂ ಕಲಾತ್ಮಕ ಮುಕ್ತಾಯದಲ್ಲಿ ಗಳಿಸಿಕೊಳ್ಳುತ್ತದೆ. ಮುಖ್ಯ ಕೃತಿಗಳು - ಜ್ಞಾನೋಕ್ತಿಗಳು, ಪ್ರಸಂಗಿ ಮತ್ತು ಸೊಲೊಮೋನನ ಸಂಗೀತ.[11]

---

ಟಿಪ್ಪಣಿಗಳು

[1]1 ಸಮುವೇಲ 16:13. [2]1 ಸಮುವೇಲ 18:7. [3]1 ಸಮುವೇಲ 18:9. [4]1 ಅರಸುಗಳು 4:34. [5]1 ಅರಸುಗಳು 10:7. [6]1 ಅರಸುಗಳು 8:27. [7]1 ಅರಸುಗಳು 8:39. [8]1 ಅರಸುಗಳು 10:27. [9]ವಿಮೋಚನಕಾಂಡ 20:3. [10]1 ಅರಸುಗಳು 11:4.

[11]ಪ್ರಸಂಗಿ ಪುಸ್ತಕವು ಅನಂತರದ ಅವಧಿಗೆ ಸಬಂಧಿಸಿರಬಹುದು.

© 2009 Truth for Today